بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 04

ಸಂಚಿಕೆ: 37

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

14 ಸೆಪ್ಟೆಂಬರ್ 2023, 14 ತಬೂಕ್ 1402 ಹಿಜರಿ ಶಮ್‌ಸಿ,
27 ಸಫರ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَلَقَدْ صَرَّفْنَا لِلنَّاسِ
فِیْ هٰذَا الْقُرْاٰنِ مِنْ كُلِّ مَثَلٍ
فَاَبٰۤی اَكْثَرُ النَّاسِ اِلَّا كُفُوْرًا

**(ಬನೀ ಇಸ್ರಾಈಲ್: 90)**

**ಅಂದರೆ: ಮನುಷ್ಯರಿಗೋಸ್ಕರ ಈ ಖುರ್‌ಆನಿನಲ್ಲಿ ಎಲ್ಲ ಉಪಮೆಗಳನ್ನೂ ಹಲವು ವಿಧದಲ್ಲಿ ನಾವು ವಿವರಿಸಿದ್ದೇವೆ. ಆದರೆ ಮನುಷ್ಯರಲ್ಲಿ ಹೆಚ್ಚಿನವರು ಅವಿಶ್ವಾಸವನ್ನು ಹೊರತು ಬೇರೆಲ್ಲವನ್ನೂ ತಿರಸ್ಕರಿಸುತ್ತಾರೆ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಯಾವುದೆ ವಸ್ತು ರಸ್ತೆಯಲ್ಲಿ ಬಿದ್ದದು ಕಂಡುಬಂದರೆ

**(2372)** ಹಝ್ರತ್ ಝೈದ್ ಬಿನ್ ಖಾಲಿದ್(ರ) ವರದಿ ಮಾಡುತ್ತಾರೆ. ಅವರು ಹೇಳಿದರು. ರಸೂಲುಲ್ಲಾಹ್ (ಸ) ರ ಬಳಿ ವ್ಯಕ್ತಿಯೊಬ್ಬನು ಬಂದನು. ಅವನು ಪೈಗಂಬರ್ (ಸ) ರೊಡನೆ ರಸ್ತೆಯಲ್ಲಿ ಬಿದ್ದ ವಸ್ತುಗಳ ಬಗ್ಗೆ ಪ್ರಸ್ತಾಪಿಸಿದನು. ಅವರು (ಸ) ನುಡಿದರು. ಆ ವಸ್ತು ಮತ್ತು ಅದರ ಗುರುತು ನೆನಪಿನಲ್ಲಿಡಿ. ಒಂದು ವರ್ಷದವರೆಗೆ ಅದರ ಕುರಿತು ಘೋಷಣೆ ಮಾಡುತ್ತಿರಿ. ಅದರ ಮಾಲೀಕನು ಬಂದರೆ ಒಳ್ಳೆಯುದು. ಇಲ್ಲದಿದ್ದರೆ, ತಾವು ಬಯಸಿದಂತೆ ಉಪಯೋಗಿಸಿ ಕೊಳ್ಳಬಹುದು. ಅವರು ಹೇಳಿದರು. ರಸ್ತೆ ತಪ್ಪಿ ಬಂದ ಕುರಿಯ ಬಗ್ಗೆ ತಮ್ಮ (ಸ) ರ ಅಭಿಪ್ರಾಯವೇನು? ಹುಝೂರ್(ಸ) ನುಡಿದರು. ಅದು ನಿಮಗಾಗಿ ಅಥವಾ ನಿಮ್ಮ ಸಹೋದರನಿಗಾಗಿ ಅಥವಾ ಯಾವುದೇ ಕ್ರೂರ ಪ್ರಾಣಿಗಾಗಿ. ಅವನು ಕೇಳಿದನು. ದಾರಿ ತಪ್ಪಿ ಬಂದ ಒಂಟೆ ಇದ್ದರೆ? ಅವರು(ಸ) ಹೇಳಿದರು. ಅದರಿಂದ ನಿನಗೆ ಏನು ಬೇಕಾಗಿದೆ! ಅದರ ಜೊತೆ ಅದರ ನೀರ ಕುಡಿಕೆ ಇದೆ ಮತ್ತು ಅದರ ಕಾಲುಗಳು ಸಹ. ನೀರು ಕುಡಿಯುತ್ತದೆ, ಮರಗಳ ಎಲೆಗಳನ್ನು ತಿನ್ನುತ್ತದೆ, ಅಷ್ಟರಲ್ಲಿ ಅದರ ಮಾಲೀಕನು ಬಂದು ಅದನ್ನು ಪಡೆಯುಬಹುದು. **(ಸಹೀಹ್ ಬುಖಾರಿ, ಸಂಪುಟ–4, ಕಿತಾಬುಲ್ ಮಸಾಖಾತ್, ಮುದ್ರಣ 2008 ಖಾದಿಯಾನ್)**

ಶತ್ರುಗಳನ್ನು ಸಹ ಪ್ರಾರ್ಥನೆಯಿಂದ ಹೊರಗಿಡಬಾರದು ಎಂಬುದೆ ನನ್ನ ಧರ್ಮವಾಗಿದೆ, ಎಷ್ಟೆಲ್ಲಾ ಪ್ರಾರ್ಥನೆ ಉದಾರವಾಗಿರುವುದೋ ಅಷ್ಟೇ ಲಾಭ ಪ್ರಾರ್ಥನೆ ಮಾಡುವವನಿಗೆ ದೊರಕುವುದು. ಮತ್ತು ಪ್ರಾರ್ಥನೆಯಲ್ಲಿ ಎಷ್ಟು ಜಿಪುಣತೆ ತೋರುವಿರಿ ಅಷ್ಟೇ ಅಲ್ಲಾಹನ ಸಾಮೀಪ್ಯದಿಂದ ದೂರವಾಗುವಿರಿ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನೆನಪಿಡಿರಿ. ಕರುಣೆಯ ಮೂರು ವಿಧಗಳಿವೆ. ಮೊದಲನೆಯದು ಭೌತಿಕ, ಎರಡನೆಯದು ಆರ್ಥಿಕ, ಮೂರನೆಯ ವಿಧ ಸಹಾನುಭೂತಿಯ ಪ್ರಾರ್ಥನೆಯಾಗಿದೆ. ಇದರಲ್ಲಿ ಕೇವಲ ಹಣ ಮತ್ತು ಬಲವಿಲ್ಲ. ಆದರೆ ಅದರ ಅನುಗ್ರಹವು ತುಂಬಾ ವಿಸ್ತಾರವಾಗಿದೆ. ಏಕೆಂದರೆ ದೈಹಿಕ ಸಹಾನುಭೂತಿಯು ಒಬ್ಬ ವ್ಯಕ್ತಿಯು ಶಕ್ತಿಯನ್ನು ಹೊಂದಿದ್ದರೆ ಮಾತ್ರ ಮಾಡಬಹುದು. ಉದಾಹರಣೆಗೆ, ಅಸಹಾಯಕ ಮತ್ತು ಗಾಯಗೊಂಡ ಬಡ ವ್ಯಕ್ತಿ ಎಲ್ಲೋ ಬಿದ್ದು ಕಷ್ಟಪಡುತ್ತಿದ್ದರೆ, ಸ್ವಯಂ ಶಕ್ತಿ ಹೊಂದಿದ ವ್ಯಕ್ತಿ ಎಂದು ಅವನಿಗೆ ಎತ್ತಿ ಸಹಾಯ ಮಾಡಬಹುದು. ಅದೇ ರೀತಿಯಲ್ಲಿ ಬಡವನ, ಅಸಹಾಯಕ, ದಿಕ್ಕುದೆಸೆ ಇಲ್ಲದವನಿಗೆ ಹಸಿವಿನ ಚಿಂತೆಯಾದರೆ, ಸಂಪತ್ತಿಲ್ಲದಿದ್ದರೆ ಹೇಗೆ ಸಹಾನುಭೂತಿ ತೋರಲು ಸಾಧ್ಯ? ಆದರೆ ಪ್ರಾರ್ಥನೆಯೊಂದಿಗಿನ ಸಹಾನುಭೂತಿ ಎಂಥ ಸಹಾನುಭೂತಿಯಾಗಿದೆ ಎಂದರೆ ಅದಕ್ಕಾಗಿ ಸಂಪತ್ತಿನ ಅವಶ್ಯಕತೆಯೂ ಇಲ್ಲ, ಶಕ್ತಿಯ ಅವಶ್ಯಕತೆಯೂ ಇಲ್ಲ, ಬದಲು ಎಲ್ಲಿಯವರೆಗೆ ಮನುಷ್ಯ ಮನುಷ್ಯನಾಗಿರುತ್ತಾನೆ ಅವನು ಇನ್ನೊಬ್ಬನಿಗಾಗಿ ಪ್ರಾರ್ಥಿಸಬಹುದು ಹಾಗೂ ಸಹಾಯ ಮಾಡಬಹುದು. ಈ ಸಹಾನುಭೂತಿಯ ಅನುಗ್ರಹ ತುಂಬಾ ವಿಸ್ತಾರವಾದುದಾಗಿದೆ. ಈ ಸಹಾನುಭೂತಿಯಿಂದ ಮನುಷ್ಯನು ಕಾರ್ಯ ಮಾಡದಿದ್ದರೆ ತಿಳಿಯಿರಿ, ಅವನು ತುಂಬಾ ದುರಾದೃಷ್ಟನಾಗಿರುವನು.

ನಾನು ಹೇಳಿದ್ದೇನೆ. ಆರ್ಥಿಕ ಮತ್ತು ದೈಹಿಕ ಸಹಾನುಭೂತಿ ತೋರುವುದರಲ್ಲಿ ಮನುಷ್ಯನು ಅಸಹಾಯಕನಾಗಿರುತ್ತಾನೆ. ಆದರೆ ಪ್ರಾರ್ಥನೆಯ ವಿಷಯದಲ್ಲಿ ಅಸಹಾಯಕನಾಗಿರುವುದಿಲ್ಲ, ನನ್ನ ಧರ್ಮವೇನೆಂದರೆ ಶತ್ರುಗಳನ್ನು ಸಹ ಪ್ರಾರ್ಥನೆಯಿಂದ ಹೊರಗಿಡಬಾರದು, ಪ್ರಾರ್ಥನೆ ಎಷ್ಟೆಲ್ಲಾ ಉದಾರವಾಗಿರುವುದೇ ಅಷ್ಟೇ ಲಾಭ ಪ್ರಾರ್ಥನೆ ಮಾಡುವವನಿಗೆ ದೊರಕುವುದು ಮತ್ತು ಪ್ರಾರ್ಥನೆಯಲ್ಲಿ ಎಷ್ಟು ಜಿಪುಣತೆ ತೋರುವಿರಿ, ಅಷ್ಟೇ ಅಲ್ಲಾಹನ ಸಾಮೀಪ್ಯದಿಂದ ದೂರವಾಗಿರುವಿರಿ. ವಾಸ್ತವವೇನೆಂದರೆ ಅಲ್ಲಾಹನ ಅನುಗ್ರಹಗಳು ಅಪರಿಮಿತವಾಗಿವೆ, ಯಾವ ವ್ಯಕ್ತಿ ಅದರಲ್ಲಿ ಮಿತಿ ಹೇರುವನೋ ಅವನ ವಿಶ್ವಾಸ ಸಹ ದುರ್ಬಲವಾಗುತ್ತದೆ.

**(ಮಲ್ಫೂಝಾತ್, ಸಂಪುಟ–1, ಪುಟ–479, ಮುದ್ರಣ 2018, ಖಾದಿಯಾನ್)**

ಈ ವಚನದಲ್ಲಿ ಇಸ್ಲಾಮಿ ನಿಯಮದ ಎಂತಹ ಆದೇಶವಿದೆ ಎಂದರೆ ಅದು ಇಸ್ಲಾಂ ಧರ್ಮವನ್ನು ಇತರ ಎಲ್ಲ ಧರ್ಮಗಳಿಂದ ಉನ್ನತವಾಗಿಸುತ್ತದೆ. ಅನಾಥರೊಡನೆ ಸದ್ವರ್ತನೆಯ ಆದೇಶ ಎಲ್ಲ ಧರ್ಮಗಳಲ್ಲಿಯೂ ಕಾಣಸಿಗುತ್ತದೆ. ಆದರೆ ಅವರ ಸಂಪತ್ತನ್ನು ರಕ್ಷಿಸಿರಿ ಮತ್ತು ಅವನ್ನು ವೃದ್ಧಿಗೊಳಿಸಲು ಪ್ರಯತ್ನಪಡೆಯಿರಿ ಎಂಬ ಆದೇಶ ಯಾವುದೇ ಇನ್ನಿತ ಧರ್ಮದಲ್ಲಿ ದೊರೆಯದು.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಬನೀ ಇಸ್ರಾಈಲ್‌ನ ವಚನ 35 **ವಲಾ ತಖ್‌ರಬು ಮಾಲಲ್ ಯತೀಮಿ ಇಲ್ಲಾ ಬಿಲ್ಲತಿ ಹಿಯ ಅಹ್‌ಸನು ಹತ್ತಾ ಯಬ್‌ಲುಗ್ಗು ಅಶುದ್ದುಹೂ; ವ ಔಫೂ ಬಿಲ್ ಅಹ್‌ದಿ, ಇನ್ನಲ್ ಅಹ್‌ದ ಕಾನ ಮಸ್‌ಊಲ** ದ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

"ಅನಾಥನು ತನ್ನ ಪ್ರಾಪ್ತ ವಯಸ್ಸಿಗೆ ತಲುಪುವವರೆಗೆ ಉತ್ತಮವಾದ ರೀತಿಯಲ್ಲಿ ಹೊರತು ನೀವು ಅವರ ಧನವನ್ನು ಸಮೀಪಿಸಬಾರದು. ನೀವು ಕರಾರನ್ನು ಪಾಲಿಸಿರಿ. ಏಕೆಂದರೆ ಕರಾರುಗಳ ಬಗ್ಗೆ ಪ್ರಶ್ನಿಸಲಾಗುವುದು."

ಈ ವಚನದಲ್ಲಿ ಕೇವಲ ಅನಾಥರ ಸಂಪತ್ತನ್ನು, ಸಂಬಂಧ ರೀತಿಯಲ್ಲಿ ಬಳಕೆ ಮಾಡದಿರಲು ಹೇಳಲಿಲ್ಲ. ಬದಲಿಗೆ ಅದನ್ನು ಸಂರಕ್ಷಿಸುತ್ತಾ ಆ ಧನವು ವೃದ್ಧಿಸಲು ಪ್ರಯತ್ನ ಮಾಡಲು ಹೇಳಲಾಗಿದೆ. ಈ ವಚನದಲ್ಲಿ ಇಸ್ಲಾಮಿ ನಿಯಮದ ಎಂತಹ ಆದೇಶವಿದೆ ಎಂದರೆ ಅದು ಇಸ್ಲಾಂ ಧರ್ಮವನ್ನು ಇತರ ಎಲ್ಲ ಧರ್ಮಗಳಿಂದ ಎತ್ತಿ ತೋರಿಸುತ್ತದೆ.

ಅನಾಥರೊಡನೆ ಉತ್ತಮ ರೀತಿಯ ವ್ಯವಹಾರ ಮಾಡುವ ಆದೇಶ ಎಲ್ಲ ಧರ್ಮಗಳಲ್ಲಿಯೂ ಇದೆ. ಆದರೆ ಅವರ ಧನವನ್ನು ಸಂರಕ್ಷಿಸುವ ಹಾಗೂ ಆ ಧನವನ್ನು ವೃದ್ಧಿಗೊಳ್ಳುವಂತೆ ಪ್ರಯತ್ನಪಡುವ ಆದೇಶ ಯಾವ ಧರ್ಮದಲ್ಲೂ ಇಲ್ಲ, ಎಂದರೆ ಈ ವಚನದಲ್ಲಿ ಒಂದು ಸಾಮಾನ್ಯ ಕೋರ್ಟ್ ಆಫ್ ವಾರ್ಡ್‌ಸ್ ಸ್ಥಾಪಿಸಲಾಗಿದೆ ಎಂದರೆ ಅಪ್ರಾಪ್ತ ಮಕ್ಕಳ ಆಸ್ತಿ ಸಂರಕ್ಷಿಸಲು

*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰه

**"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"**

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಢೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

**——————(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))**

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಹಿಂದಿನ ಎರಡು ಸಂಚಿಕೆಗಳಿಂದ ನಾವು "ಮುನ್ಸಿಫ್" ಹೈದರಾಬಾದ್ ಪತ್ರಿಕೆ, ಅಹ್ಮದಿಯಾ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್, ಮಹದಿ ಮೌಊದ್(ಅ) ರವರ ಮೇಲೆ ಮಾಡಿದ ಆರೋಪಗಳಿಗೆ ಉತ್ತರ ನೀಡುತ್ತಿದ್ದೇವೆ. ಆರೋಪಗಳ ವಿವರಣೆ ಮತ್ತು ಅದರ ಹಿನ್ನಲೆ 17 ಆಗಸ್ಟ್‌ರ ಸಂಚಿಕೆಯಲ್ಲಿ ನೋಡಬಹುದಾಗಿದೆ. ಮುನ್ಸಿಫ್‌ನ ಒಂದು ಆರೋಪ ಹೀಗಿದೆ. ಸಯ್ಯದ್‌ನಾ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್ ಮಹದಿ ಮೌಊದ್(ಅ) ಅವರು ಬ್ರಿಟೀಷರೊಂದಿಗೆ ಸೇರಿ ಸಂಚು ಹೂಡಿದ್ದರು. ನವೂಝು ಬಿಲ್ಲಾಹ್ ಮಿನ್ ಝಾಲಿಕ್. ನಾವು ಪ್ರಬಲ ಸಾಕ್ಷ್ಯಗಳೊಂದಿಗೆ ಹಾಗೂ ಪುರಾವೆಗಳೊಂದಿಗೆ ಇದನ್ನು ಸ್ಪಷ್ಟಪಡಿಸಿದ್ದೇವೆ. ಸಂಚಿನ ಉಪಮೆ ಬಹಳ ದೂರದ ಮಾತಾಯಿತು. ಅವರ ಪಾದರಿಗಳೊಂದಿಗೆ ಸಂಧಾನ ಅಥವಾ ಅವರ ಸಹವಾಸ, ಸೂರ್ಯನು ಪಶ್ಚಿಮದಿಂದ ಉದಯವಾಗುವುದು ಹೇಗೆ ಅಸಾಧ್ಯವೋ ಹಾಗೆಯೇ ಅಸಾಧ್ಯವಾಗಿತ್ತು. ಅದರ ಪ್ರಬಲ ಕಾರಣವೇನೆಂದರೆ ಅವರು ಇಸ್ಲಾಮ್ ಮತ್ತು ಅದರ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರಿಗೆ ನಿಂದಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಅವರ ಧರ್ಮದ ವಿರುದ್ಧ ಎಂಥ ಧರ್ಮಯುದ್ಧ (ಜಿಹಾದ್) ಸಾರಿದ್ದರು ಎಂದರೆ ಹಿಂದಿನ 1400 ವರ್ಷಗಳಲ್ಲಿ ಅದರ ಉದಾಹರಣೆ ಸಿಗುವುದು ದುರ್ಲಭವಾಗಿದೆ. ಇಂತಹ ವ್ಯಕ್ತಿಯನ್ನು ಬ್ರಿಟಿಷರು, ತಮ್ಮ ಧರ್ಮದ ವಿನಾಶ ಬಯಸುವ ವ್ಯಕ್ತಿಯೊಬ್ಬನನ್ನು, ತನ್ನ ಲಾಭಕ್ಕೆಂದು ನಿಲ್ಲಿಸಲು ಸಧ್ಯವೇ? ಕ್ರಿಶ್ಚಿಯನ್ನರ ವಿರುದ್ಧ ಅವರ ಮಹೋನ್ನತವಾದ ಧರ್ಮಯುದ್ಧ (ಜಿಹಾದ್) ನ ಒಂದು ಸಣ್ಣದಾದ ನೋಟ. ನಾವು ನಮ್ಮ ಪದಗಳಲ್ಲಿ ವಿವರಿಸಿದ್ದೆವು. ಇಂದು ನಾವು ಇದೇ ಸಂಬಂಧವಾಗಿ ಅವರ ಕೆಲವು ಅಧ್ಯಾಪನೆಗಳನ್ನು ಪ್ರಸ್ತುತಪಡಿಸುವೆವು.

ಶಿಲುಬೆಗೆ ಸಂಬಂದಿಸಿದ ವಿಶ್ವಾಸಗಳನ್ನು ನುಚ್ಚುನುರು ಮಾಡಲು
ಮಸೀಹರ ಹೆಸರಿನಲ್ಲಿ ಈ ವಿನೀತನು ಕಳುಹಿಸಲ್ಪಟ್ಟಿರುತ್ತಾನೆ.

ಹದೀಸಿನಲ್ಲಿದೆ **"ಯಕ್ಸಿರುಸ್ಸಲೀಬ ವ ಯಖ್‌ತುಲುಲ್ ಖಿನ್‌ಝೀರ"**, ಅದರನ್ವಯ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರ ಗುರಿ ಏನಾಗಿತ್ತೆಂದರೆ, ಕ್ರೈಸ್ತ ಧರ್ಮವನ್ನು ನಾಶಪಡಿಸಬೇಕು. ಆದ್ದರಿಂದ ವಿಚಾರಿಸಲು ಯೋಗ್ಯವಾಗಿದೆ. ಇಂತಹ ವ್ಯಕ್ತಿಯನ್ನು ಬ್ರಿಟೀಷರು ನಿಲ್ಲಿಸಬಹುದೇ? ಅವರ ಗುರಿಯೇ ಕ್ರೈಸ್ತ ಧರ್ಮವನ್ನು ನಾಶಪಡಿಸುವುದಾಗಿದೆ. ವಾಸ್ತವವೇನೆಂದರೆ ಅವರಿಗೆ ಮಸೀಹ್ ಮಹದಿಯ ಪದವಿ ಮತ್ತು ಉಮ್ಮತಿ ನಬಿಯ ಸ್ಥಾನವು ಅಲ್ಲಾಹನ ಕಡೆಯಿಂದ ದೊರಕಿತ್ತು. ಬ್ರಿಟಿಷರು ಅವರನ್ನು ನಬಿಯನ್ನಾಗಿ ಮಾಡಿದ್ದಾರೆ ಎಂಬ ಆಕ್ಷೇಪಣೆಯು ಹಾಸ್ಯಾಸ್ಪದವಾಗಿದೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಕಾರ್ಯ ಮತ್ತು ತನ್ನ ಪದವಿಯನ್ನು ಯಾವ ಪದಗಳಲ್ಲಿ ವರ್ಣಿಸಿದ್ದಾರೆ, ಅದನ್ನು ಪ್ರಸ್ತುತಪಡಿಸುತ್ತಿದ್ದೇವೆ.

ಈ ವಿನೀತನನ್ನು ಪೂರ್ವಜರ ಸಹಜ ಗುಣಗಳ ಸಾದೃಶ್ಯರೂಪವಲ್ಲದೆ ಬರಾಹೀನ್ ಅಹ್ಮದಿಯಾದಲ್ಲಿ ಅದರ ವಿವರ ಸಂಪೂರ್ಣ ರೀತಿಯಲ್ಲಿ ನೀಡಲಾಗಿದೆ. ಹಝ್ರತ್ ಮಸೀಹರ ಗುಣಗಳಲ್ಲಿ ಒಂದು ವಿಶೇಷ ರೀತಿಯ ಸಂಬಂಧವಿದೆ. ಅದೇ ಸಂಬಂಧದ ಕಾರಣದಿಂದಾಗಿ ಮಸೀಹನ ಹೆಸರಿನಲ್ಲಿ ಈ ವಿನೀತನು ಕಳುಹಿಸಲ್ಪಟ್ಟಿದ್ದಾನೆ. ಶಿಲುಬೆಯ ವಿಶ್ವಾಸಗಳನ್ನು ನುಚ್ಚುನೂರು ಮಾಡುವ ಉದ್ದೇಶದಿಂದ. ಆದ್ದರಿಂದ ನಾನು ಶಿಲುಬೆಯನ್ನು ಮುರಿಯಲು ಮತ್ತು ಹಂದಿಗಳನ್ನು ಕೊಲ್ಲಲು ಕಳುಹಿಸಲ್ಪಟ್ಟಿದ್ದೇನೆ. ನಾನು ಆಕಾಶದಿಂದ ಅವತರಿಸಿದ್ದೇನೆ. ನನ್ನ ಜೊತೆಯಲ್ಲಿ ಪವಿತ್ರ ದೇವದೂತರಿದ್ದರು. ಅವರನ್ನು ನನ್ನ ಪ್ರಭು ನನ್ನ ಉದ್ದೇಶವನ್ನು ಪೂರ್ಣಗೊಳಿಸಲು ಸಿದ್ಧಪುರುಷರ ಹೃದಯಗಳಲ್ಲಿ ಹಾಕುವನು ಬದಲಿಗೆ ಹಾಕುತ್ತಿದ್ದಾನೆ. ನಾನು ಮೌನವಹಿಸಿದರೂ, ನನ್ನ ಲೇಖನಿಯನ್ನು ಬರೆಯುವುದರಿಂದ ತಡೆದರೂ, ನನ್ನ ಜೊತೆಯಲ್ಲಿ ಅವತರಿಸಿದ ದೇವದೂತರು ತನ್ನ ಕಾರ್ಯ ನಿಲ್ಲಿಸುವುದಿಲ್ಲ, ಅವರ ಕೈಗಳಲ್ಲಿ ದೊಡ್ಡ ದೊಡ್ಡ ಬುರುಜುಗಳಿವೆ. ಅವು ಶಿಲುಬೆಯನ್ನು ಮುರಿಯಲು ಮತ್ತು ಸೃಷ್ಟಿ ಪೂಜೆಯ ದೆವ್ವವನ್ನು ತಡಿಯಲು ನೀಡಲಾಗಿದೆ."

(ಫತಹ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–3, ಪುಟ–11 ಅಡಿಟಿಪ್ಪಣಿ)

ಮಸೀಹರು ಶಿಲುಬೆಯನ್ನು ಮುರಿದರೆ ಅದು ಪುನರುತ್ಥಾನ ದಿನದವರೆಗೆ
ಜೋಡನೆಯಾಗದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಶಿಲುಬೆ ಮುರಿಯುವುದು ಎಂದರೆ ಶಿಲುಬೆಯ ಕಟ್ಟಿಗೆ ಅಥವಾ ಬೆಳ್ಳಿ ಚಿನ್ನದ ಶಿಲುಬೆ ಮುರಿಯುವುದು ಎಂದಲ್ಲ. ಹಾಗೆ ತಿಳಿಯುವುದು ಘೋರ ತಪ್ಪಾಗಿರುತ್ತದೆ. ಈ ರೀತಿಯ ಶಿಲುಬೆಗಳಂತೂ ಇಸ್ಲಾಮಿ ಯುದ್ಧಗಳಲ್ಲಿ ಮುರಿಯುತ್ತಿರುತ್ತದೆ ಬದಲಿಗೆ ಇದರ ಅರ್ಥ ವಾಗ್ದತ್ತ ಮಸೀಹರು ಶಿಲುಬೆಗೆ ಸಂಬಂಧಿಸಿದ ತನ್ನ ವಿಶ್ವಾಸಗಳನ್ನು ಹೊಗಲಾಡಿಸುವರು ಎಂದಾಗಿದೆ. ಅದಾದ ನಂತರ ಪುನರುತ್ಥಾನ ದಿನದವರೆಗೆ ಈ ಶಿಲುಬೆಯ ತಪ್ಪು ವಿಶ್ವಾಸ ನೆಲೆಯಿರಲಿಕ್ಕಿಲ್ಲ.

(ಹಖೀಖತುಲ್ ವಹಿ, ರೂಹಾನಿ ಖಝಾಈನ್, ಸಂಪುಟ–22, ಪುಟ–324)

ಈಸಾರ ಮರಣದಲ್ಲಿ ಇಸ್ಲಾಮಿನ ಜೀವಿತವಿದೆ.

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಬ್ರಿಟಿಷರ ದೇವನನ್ನು ಮೃತಪಟ್ಟಿರುವನು ಎಂದು ಸಾಬೀತುಗೊಳಿಸಿದರು. ಪವಿತ್ರ ಖುರ್‌ಆನ್, ಹದೀಸು, ಬೈಬಲ್ ಹಾಗೂ ಐತಿಹಾಸಿಕ ಸಾಕ್ಷ್ಯಗಳಿಂದ ಅವರ ಗೋರಿಯನ್ನು ಸಹ ತೋರಿಸಿಕೊಟ್ಟರು. ಅವರ ಗೋರಿಯು ಶ್ರೀನಗರದ ಮೊಹಲ್ಲ ಖಾನಿಯಾರ್‌ನಲ್ಲಿದೆ. ಇಂತಹ ವ್ಯಕ್ತಿಯೊಬ್ಬನನ್ನು ಬ್ರಿಟೀಷರು ತಮ್ಮ ಹಿತಶಕ್ತಿಗೋಸ್ಕರ ನಿಲ್ಲಿಸಬಹುದೇ? ಅವರು ಅವರ ಪರಮಾತ್ಮನನ್ನೆ ಮೃತ ದೇವ ಎಂದು ಸಾಬೀತು ಪಡಿಸಿದರು. ಅವರ ಧರ್ಮವನ್ನೇ ಜೀವಂತ ಸಮಾಧಿಗೊಳಿಸಿದರು. ಆದ್ದರಿಂದ ಇಂತಹ ಮೂರ್ಖ ಆರೋಪದಿಂದ "ಮುನ್ಸಿಫ್" ದೂರವಿರುವುದು ಉತ್ತಮ. ಇದಕ್ಕೆ ಸಂಬಂಧದಲ್ಲಿ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಒಂದು ಉಲ್ಲೇಖ ಪ್ರಸ್ತುತಪಡಿಸುತ್ತೇವೆ. ಹಝ್ರತ್ ಮಸೀಹ ಮೌಊದ್(ಅ) ನುಡಿಯುತ್ತಾರೆ:

"ನಾನು ಬಹಳ ಒತ್ತು ಕೊಟ್ಟು ಮತ್ತು ಪೂರ್ಣ ವಿಶ್ವಾಸ ಹಾಗೂ ದಿಟವಾಗಿ ಹೇಳುತ್ತೇನೆ. ಅಲ್ಲಾಹನು ಎಲ್ಲಾ ಇತರ ಧರ್ಮಗಳನ್ನು ಅಳಿಸಿ ಹಾಕಲು ಮತ್ತು ಇಸ್ಲಾಂ ಧರ್ಮವನ್ನು ವಿಜಯಿಯಾಗಿ ಮಾಡಲು ಹಾಗೂ ಬಲಪಡಿಸಲು ನಿಶ್ಚಯಿಸಿದ್ದಾನೆ. ಅಲ್ಲಾಹನ ಈ ನಿಶ್ಚಯವನ್ನು ತಡೆಯಲು ಯಾವ ಶಕ್ತಿ, ಕೈಗಳಿಂದಲೂ ಸಾಧ್ಯವಿಲ್ಲ. ಅವನು **"ಫಅ್‌ಆಲುಲ್ ಲಿಮಾ ಯುರೀದ್"** ಆಗಿದ್ದಾನೆ. "ಮುಸ್ಲಿಮರೇ! ನೆನಪಿಡಿರಿ. ಅಲ್ಲಾಹನು ನನ್ನ ಮೂಲಕ ಈ ಸುದ್ದಿ ನೀಡಿರುವನು, ನಾನು ಈ ಸಂದೇಶ ಮುಟ್ಟಿಸಿದ್ದೇನೆ. ಈಗ ಅದನ್ನು ಕೇಳುವುದು ಕೇಳದಿರುವುದು ನಿಮಗೆ ಸೇರಿದ್ದಾಗಿದೆ. ಹಝ್ರತ್ ಈಸಾ(ಅ) ಮರಣಪಟ್ಟಿರುವುದು ವಾಸ್ತವಾಗಿದೆ. ಮತ್ತು ನಾನು ಅಲ್ಲಾಹನ ಆಣೆವಹಿಸಿ ಹೇಳುತ್ತೇನೆ. ಆ ಆಗಮಿಸ ಬೇಕಾದ ವಾಗ್ದತ್ತ ಮಸೀಹ್ ನಾನಾಗಿದ್ದೇನೆ. ಇಸ್ಲಾಮಿನ ಜೀವ ಈಸಾವಿನ ಮರಣದಲ್ಲಿದೆ." (ಲೆಕ್ಚರ್ ಲುಧಿಯಾನ, ರೂಹಾನಿ ಖಝಾಈನ್, ಸಂಪುಟ–20, ಪುಟ–290)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನಾನು ದೊಡ್ಡ ದೊಡ್ಡ ಪಾದರಿಗಳೊಂದಿಗೆ ಕೇಳಿದ್ದೇನೆ. ಅದಕ್ಕೆ ಅವರು ಹೇಳಿದರು. ಈಸ ಮಸೀಹರು ಮೃತಪಟ್ಟಿರುವನು ಎಂದು ಸಾಬೀತಾದರೆ ನಮ್ಮ ಧರ್ಮ ಜೀವಂತವಾಗಿ ಉಳಿಯಲು ಸಾಧ್ಯವಿಲ್ಲ. (ಅದೇ ಪುಟ 264)

ಯಾವ ವ್ಯಕ್ತಿ ದೇವನಾಗಿ ಮೂರು ದಿನದವರೆಗೆ ಮೃತಪಟ್ಟಿರುತ್ತಾನೆ. ಅವನ ಶಕ್ತಿಯ ಕುರಿತು ಮಾತಾಡುವುದು ನಾಚಿಕೆಯ ವಿಷಯವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಪ್ರಬಲ ಬೌದ್ಧಿಕ ಹಾಗೂ ಸಾಕ್ಷ್ಯಗಳೊಂದಿಗೆ, ಒಬ್ಬ ಮನುಷ್ಯನು ಎಂದೂ ದೇವನಾಗಲು ಸಾಧ್ಯವಿಲ್ಲ ಎಂದು ಸಾಬೀತುಪಡಿಸಿದರು. ನೋಡಿರಿ, ಬ್ರಿಟೀಷರ ಪರಮಾತ್ಮನ ದೌರ್ಬಲ್ಯ ಮತ್ತು ಬಲಹೀನತೆಯ ಬಗ್ಗೆ ಎಂತಹ ಶಕ್ತಿಯುತ ಪದಗಳೊಂದಿಗೆ ವಿವರಿಸಿದ್ದಾರೆ. ಆದ್ದರಿಂದ ಇಂತಹ ವ್ಯಕ್ತಿಯೊಬ್ಬನನ್ನು ಬ್ರಿಟೀಷರು ತಮ್ಮ ಹಿತಾಸಕ್ತಿ ಕಾಣಲು ಸಾಧ್ಯವೇ?

ಅವರು(ಅ) ಹೇಳುತ್ತಾರೆ: "ಪಾದರಿ ಮಹಾಶಯರು ಸಹ ತಮ್ಮ ದೇವನನ್ನು ಸರ್ವಶಕ್ತಿ ಎಂದು ಭಾವಿಸುವುದಿಲ್ಲ. ಏಕೆಂದರೆ ಅವರ ದೇವನು ತನ್ನ ವಿರೋಧಿಗಳ ಕೈಯಿಂದ ಹೊಡೆತ ತಿಂದನು, ಅವರಿಗೆ ಜೈಲಿನಲ್ಲಿ ಹಾಕಲಾಯಿತು, ಶಿಲುಬೆಗೆ ಏರಿಸಲಾಯಿತು. ಅವನು ಸರ್ವಶಕ್ತನಾಗಿರುತ್ತಿದ್ದರೆ ಇಷ್ಟೆಲ್ಲ ಅವಮಾನಗಳು ದೇವನಾಗಿ ಸಹಿಸಿಕೊಳ್ಳುತ್ತಿರಲಿಲ್ಲ. ಅಲ್ಲದೇ ಅವನು ಸರ್ವಶ್ರೇಷ್ಠನಾಗಿರುತ್ತಿದ್ದರೆ ಯಾವ ಅವಶ್ಯಕತೆ ಇತ್ತು. ತನ್ನ ದಾಸರನ್ನು ಮುಕ್ತಿ ಕೊಡಿಸಲು ತಾನು ಸಾಯುವ ಯೋಜನೆ ಹಾಕಿಕೊಳ್ಳುತ್ತಿದ್ದ. ಅದರಿಂದ ಅವರು ಮುಕ್ತಿ ಪಡೆಯುವರು ಎಂದು. ಯಾವ ವ್ಯಕ್ತಿ ಪರಮಾತ್ಮನಾಗಿ ಮೂರು ದಿನ ಮೃತಪಟ್ಟಿರುವುದು ಆತನ ಶಕ್ತಿಯ ಕುರಿತು ಹೇಳುವುದೇ ನಾಚಿಕೆಯ

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಅಹ್ಮದಿಯರಿಗೆ ಪಾಕಿಸ್ತಾನದಲ್ಲಿ ಕೊನೆಯ ಶರೀಅತ್ ಗ್ರಂಥವಾದ ಪವಿತ್ರ ಖುರ್‌ಆನನ್ನು ಪಾರಾಯಣ ಮಾಡುವುದನ್ನು, ಆಲಿಸುವುದನ್ನು, ಇರಿಸುವುದನ್ನು ಕೂಡ ನಿಷೇಧಿಸಲಾಗಿದೆ ಮತ್ತು ಅದು ಬಹಳ ದೊಡ್ಡ ಅಪರಾಧವಾಗಿದೆ. ಅದೇ ಗ್ರಂಥದ ಮೂಲಕ ಅಹ್ಮದಿಯಾ ಜಮಾಅತ್ ಲೋಕದಲ್ಲಿ ಇಸ್ಲಾಮಿನ ಸಂದೇಶವನ್ನು ತಲುಪಿಸುತ್ತಿದೆ ಮತ್ತು ಲೋಕದ ಸುಧಾರಣೆ ಮಾಡುತ್ತಿದೆ.

ಜಮಾಅತಿನ ವಿರುದ್ಧ ಸುಳ್ಳು ಪ್ರಚಾರ ನಡೆಯುತ್ತಿದೆ ಎಂದು ನನಗೆ ಖಚಿತವಾಯಿತು. ದೈವಿಕ ಜಮಾಅತಿನ ವಿರುದ್ಧ ಯಾವಾಗಲೂ ಸುಳ್ಳು ಪ್ರಚಾರ ನಡೆಯುತ್ತದೆ. (ಇಮಾಮ್ ತಮಾನೆ)

ಪಾಕಿಸ್ತಾನದಲ್ಲಿರುವ ನಮ್ಮ ವಿರೋಧಿಗಳು ಕೇವಲ ವಿರೋಧಕ್ಕಾಗಿ ವಿರೋಧಿಸದೆ ನಮ್ಮ ಬೋಧನೆಯನ್ನು ಆಲಿಸಿ, ಓದಿ ಮತ್ತು ಅರ್ಥಮಾಡಿಕೊಳ್ಳಬೇಕು. ನಂತರ ಆಕ್ಷೇಪಣೆಯನ್ನು ಮಂಡಿಸಬೇಕು. ಇದನ್ನೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನೀವೆಲ್ಲರು ನನ್ನನ್ನು ವಿರೋಧಿಸುತ್ತೀರಿ ನನ್ನ ಮಾತುಗಳನ್ನು ಮೊದಲು ಆಲಿಸಿರಿ ಎಂದು ಪದೇ ಪದೇ ಹೇಳಿದ್ದಾರೆ.

ನಾನು ಅನೇಕ ಕಾಲದ ತನಕ ಅನೇಕ ಧರ್ಮಗಳ ಬಗ್ಗೆ ಪೂರ್ಣವಾಗಿ ಅವಲೋಕನ ನಡೆಸಿದ್ದೇನೆ. ಅಹ್ಮದಿಯಾ ಜಮಾಅತ್ ಮಾತ್ರವೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿದೆ ಎಂದು ನನಗೆ ಈಗ ಮನವರಿಕೆ ಆಗಿದೆ. ಅದರ ಮೂಲಕ ನನ್ನ ಹೃದಯ ಮತ್ತು ಮನಸ್ಸಿಗೆ ಸಮಾಧಾನ ಲಭಿಸುತ್ತಿದೆ. ನನಗೆ ಇಲ್ಲಿ ಆಧ್ಯಾತ್ಮಿಕತೆಯ ಅನುಭವವಾಗುತ್ತಿದೆ. (ಚೆಕ್ ರಿಪಬ್ಲಿಕ್‌ನ ಓರ್ವ ಯುವಕ)

ಲೋಕದ ಅನೇಕ ಸ್ಥಳಗಳಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅಲ್ಲಾಹನ ಸಹಾಯಗಳ ಘಟನೆಗಳು ಕಂಡುಬರುತ್ತವೆ. ಅವರು ನಮಗೆ ನೈಜ ಇಸ್ಲಾಮಿನ ಪಾಠವನ್ನು ಕಲಿಸಿಕೊಟ್ಟರು. ಈ ಘಟನೆಗಳು ಅಹ್ಮದಿಯ್ಯತ್ತಿನ ಸತ್ಯತೆಯ ಪುರಾವೆಗಳಾಗಿವೆ. ಅವುಗಳು ಜನರ ವಿಶ್ವಾಸಗಳನ್ನು ಸುದೃಢಗೊಳಿಸುತ್ತಿವೆ. ಅಲ್ಲಾಹನು ಲೋಕದ ಕಣ್ಣುಗಳನ್ನು ತೆರೆಸಲಿ. ನಂಬಿಕೆ ಮತ್ತು ದೃಢವಿಶ್ವಾಸವನ್ನು ಸ್ವೀಕಾರ ಮಾಡಲು ಸೌಭಾಗ್ಯ ನೀಡಲಿ.

**ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಮೇಲೆ ಸುರಿಮಳೆಯಂತೆ ಅವತರಿಸುತ್ತಿರುವ ದೈವಿಕ ಅನುಗ್ರಹಗಳು ಹಾಗೂ ಬೆಂಬಲದ ವಿಶ್ವಾಸ ವರ್ಧಕ ಘಟನೆಗಳ ಪ್ರಸ್ತಾವನೆ**

ಮಾನ್ಯ ಅಮತುಲ್ ಹಾದಿ ಸಾಹಿಬ, ಸಾಕಿಬ್ ಕಾಮ್ರಾನ್ ಸಾಹಿಬ್, ಅಝೀಝುಮ್ ಆರಬ್ ಕಾಮ್ರಾನ್ ಮತ್ತು ಪ್ರೊ. ಡಾ॥ ಮುಹಮ್ಮದ್ ಇಸ್‌ಹಾಖ್ ದಾವುದ್ ಸಾಹಿಬ್ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗ್ವಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ ಯ **'ಮಸ್ಜಿದ್ ಇಸ್ಲಾಮಬಾದ್'** ನಿಂದ **11–08–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ
اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔
اِيَّاكَ نَعْبُدُ وَاِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔
صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ۔

ಅಲ್ಲಾಹನ ವಾಗ್ದಾನಗಳ ಪ್ರಕಾರ ಹಝ್ರತ್ ಪೈಗಂಬರ್(ಸ)ರ ಸತ್ಯಪ್ರೇಮಿಯಾದ ದಾಸರಾದ ಹಝ್ರತ್ ಮಸೀಹ್ ಮೌಊದ್(ರ)ರ ಜಮಾಅತಿನ ಮೇಲೆ ಪ್ರತಿದಿನ ಅಲ್ಲಾಹನ ಅನುಗ್ರಹಗಳ ಮಳೆ ವರ್ಷಿಸುತ್ತದೆ. ಅದರ ಪ್ರಸ್ತಾಪ ಜಲ್ಸದ ರಿಪೋರ್ಟಿನಲ್ಲಿ ಆಗುತ್ತದೆ.

ಆದರೆ ಪರಿಮಿತವಾದ ಸಮಯದಲ್ಲಿ ಎಲ್ಲವನ್ನು ಹೇಳಲು ಸಾಧ್ಯವಲ್ಲ ಎಂದು ಹೇಳಿದ್ದೆ. ಸರ್ವಶಕ್ತನಾದ ಅಲ್ಲಾಹನು ಹೇಗೆ ಅನುಗ್ರಹವನ್ನು ನೀಡುತ್ತಾನೆ, ಸರ್ವಶಕ್ತನಾದ ಅಲ್ಲಾಹನು ಜಮಾಅತ್‌ನ ಬಗ್ಗೆ ಜನರ ಹೃದಯವನ್ನು ಹೇಗೆ ತೆರೆಯುತ್ತಾನೆ, ಸರ್ವಶಕ್ತನಾದ ಅಲ್ಲಾಹನು ಹೇಗೆ ವಿಶ್ವಾಸವನ್ನು ದೃಢಗೊಳಿಸುತ್ತಾನೆ, ಶತ್ರುಗಳನ್ನು ಹೇಗೆ ಸೋಲಿಸುತ್ತಾನೆ. ಜನರು ಲೆಕ್ಕವಿಲ್ಲದಷ್ಟು ಘಟನೆಗಳನ್ನು ಬರೆಯುತ್ತಲೇ ಇದ್ದಾರೆ, ಅವುಗಳಲ್ಲಿ ಕೆಲವನ್ನು ನಾನು ಅವುಗಳಲ್ಲಿ ಕೆಲವನ್ನು ಇಂದು ಸಹ ಪ್ರಸ್ತಾಪಿಸುತ್ತೇನೆ. ಏಕೆಂದರೆ ಈ ಘಟನೆಗಳು ಅನೇಕ ಅಹ್ಮದೀಯರ ಹೃದಯದಲ್ಲಿ ನಂಬಿಕೆಯನ್ನು ಬಲಪಡಿಸಲು ಕಾರಣವಾಗುತ್ತವೆ.

ಸರ್ವಶಕ್ತನಾದ ಅಲ್ಲಾಹನು ಹೇಗೆ ವಿವಿಧ ತಬ್ಲೀಗ್‌ನ ಮೂಲಕ ಪರಿಶುದ್ಧ ಆತ್ಮಗಳನ್ನು ಜಮಾಅತ್‌ಗೆ ಕರೆತರುತ್ತಿದ್ದಾನೆ ಮತ್ತು ಹೊಸ ಜಮಾಅತ್‌ಗಳನ್ನು ಸ್ಥಾಪಿಸುತ್ತಿದ್ದಾನೆ ಎಂಬುದರ ಬಗ್ಗೆ ನಮ್ಮ ಎಫ್‌ಎಂ ರೇಡಿಯೊ ಇರುವ ಕಾಂಗೋದ ಕಿನ್ಶಾಸಾದ ಸ್ಥಳೀಯ ಮಿಷನರಿ ಹಮೀದ್ ಸಾಹಿಬ್ ಅವರು ಬರೆಯುತ್ತಾರೆ: ವೀರಾ ಪಟ್ಟಣದಲ್ಲಿ ನಮ್ಮ ರೇಡಿಯೋ ಕಾರ್ಯಕ್ರಮವನ್ನು ಆಲಿಸಿಕೊಂಡು ಪ್ರಾದೇಶಿಕ ಮಸೀದಿಯ ಇಮಾಮರಾದ ಈಸಾ ಸಾಹಿಬ್‌ರು ಜಮಾಅತನ್ನು ಸಂಪರ್ಕಿಸಿ ಮಿಶನ್ ಹೌಸಿಗೆ ಬಂದರು. ಅವರು ಜಮಾಅತಿನ ಸಂದೇಶವನ್ನು ಮನವರಿಕೆ ಮಾಡಿಕೊಂಡು ಬೈಅತ್ ಮಾಡಿದರು. ಅನಂತರ ತಮ್ಮ ಊರಿಗೆ ಹೋಗಿ ತಬ್ಲೀಗ್ ಮಾಡಿದರು ಮತ್ತು 24 ವ್ಯಕ್ತಿಗಳು ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಿದರು. ಅನಂತರ ನಮ್ಮ ಮುಬಲ್ಲಿಗ್ ಆ ಗ್ರಾಮಕ್ಕೆ ಭೇಟಿ ನೀಡಿದರು. ಮತ್ತೂ 8 ವ್ಯಕ್ತಿಗಳು ಜಮಾಅತಿನಲ್ಲಿ ಪ್ರವೇಶಿಸಿದರು. ಹೀಗೆ ಅಲ್ಲಿ ಹೊಸ ಜಮಾಅತ್ ಸ್ಥಾಪಿತಗೊಂಡಿತು. ಈಗ, ಒಳ್ಳೆಯ ಸ್ವಭಾವದ ಇಮಾಮ್‌ಗಳು ಒಂದು ಕಡೆ, ಈ ಸಂದೇಶವನ್ನು ಕೇಳಿದ ನಂತರ ಅವರಿಗೆ ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಅಲ್ಲಾಹನು ನೀಡುತ್ತಾನೆ, ಮತ್ತು ಇನ್ನೊಂದು ಕಡೆ, ವಿರೋಧವನ್ನು ಹೊರತುಪಡಿಸಿ ಏನೂ ತಿಳಿದಿಲ್ಲದ ಪಾಕಿಸ್ತಾನಿ ವಿದ್ವಾಂಸರಿದ್ದಾರೆ.

ಕನ್ಶಾಸದ ರಾಜ್ಯವಾದ ಮಾಯೀನ್ ದೂಂಬೆಯ ಒಂದು ಗ್ರಾಮದಲ್ಲಿ ಮುಅಲ್ಲಿಂ ಉಮರ್ ಮುನವ್ವರ್ ಸಾಹಿಬ್‌ರನ್ನು ತಬ್ಲೀಗಿಗಾಗಿ ಕಳುಹಿಸಲಾಯಿತು.  ವಹಾಬಿ ಮುಸ್ಲಿಮರ ಮಸೀದಿಗೂ ಹೋಗಿದ್ದರು. ಜನರ ನಡುವೆ ಕರಪತ್ರಗಳನ್ನು ಹಂಚಿದರು. ಕೆಲ ಕಿಡಿಗೇಡಿ ಯುವಕರು ಮಸೀದಿಯಿಂದ ಹೊರಗೆ ಬಂದು ಗಲಾಟೆ ಮಾಡಿ ಕಲ್ಲು ತೂರಾಟ ನಡೆಸಿದ್ದಾರೆ. ಈಗ ಅವರು ಆಫ್ರಿಕಾದ ಜನರು ಅವಿದ್ಯಾವಂತರಾಗಿದ್ದರಿಂದ ಮಾಉಗಳನ್ನು ಕೇಳುತ್ತಾರೆ ಎಂದು ಹೇಳುತ್ತಾರೆ. ಆದರೆ ಅಲ್ಲಿಯೂ ಕೂಡ ವಿರೋಧವಿದೆ. ಕಲ್ಲೆಸೆತಗಳಿಂದ ತಪ್ಪಿಸಿಕೊಳ್ಳುತ್ತಾ ಮುಅಲ್ಲಿಂ ಸಾಹಿಬ್‌ರು ತಬ್ಲೀಗ್ ಮಾಡುತ್ತಾ ಇದ್ದರು. ಜನರು ಅವರ ಸಹನೆ ಮತ್ತು ತಾಳ್ಮೆಯಿಂದ ಬಹಳ ಪ್ರಭಾವಿತಗೊಂಡರು. ಮತ್ತು ಆ ಕಾರಣಕ್ಕಾಗಿ ಹೊರಟುಹೋದ ಕೆಲವರು ನಂತರ ಮಸೀದಿಗೆ ಹಿಂತಿರುಗಿ ಅವರ ಮಾತುಗಳನ್ನು ಆಲಿಸಲು ಪ್ರಾರಂಭಿಸಿದರು. ಜಮಾಅತ್‌ನ ಬಗ್ಗೆ ಪ್ರಶ್ನೆಗಳನ್ನು ಕೇಳಿದರು, ಆಕ್ಷೇಪಣೆಗಳನ್ನು ಎತ್ತಿದರು, ಅನೇಕ ಪ್ರಶ್ನೆಗಳಿಗೆ ಉತ್ತರಿಸಿದರು.

ಅಲ್ಲಾಹನ ಸಂದೇಶವಾಹಕರು ಹಝ್ರತ್ ಪೈಗಂಬರ್(ಸ) ಅವರು ಮಕ್ಕಾದಲ್ಲಿ ಎಲ್ಲಾ ಹಜ್ಜ್ ನಿರ್ವಹಿಸುತ್ತಿರುವಾಗ ನೀವು ಲಂಡನ್‌ಗೆ ಹೋಗಿ ಹಜ್ ಮಾಡುತ್ತೀರ ಎಂದು ಜೋರಾಗಿ ಮಾತನಾಡುತ್ತಿದ್ದ ದುಷ್ಟ ಯುವಕ ಹೇಳಿದನು. ಹಝ್ರತ್ ಪೈಗಂಬರ್(ಸ) ಅವರು ಎಷ್ಟು ಹಜ್ಜ್‌ಗಳನ್ನು ಮಾಡಿದ್ದಾರೆ ಎಂದು ಮುಅಲ್ಲಿಮ್ ಸಾಹೇಬರು ಕೇಳಿದರು? ಅದಕ್ಕೆ ಆ ಯುವಕನು ಹಝ್ರತ್ ಪೈಗಂಬರ್(ಸ) ಅವರು ಹುಟ್ಟಿದಾಗಿನಿಂದ ತನ್ನ ಜೀವನದುದ್ದಕ್ಕೂ ಹಜ್ಜ್ ಯಾತ್ರೆಯನ್ನು ಮಾಡುತ್ತಿದ್ದರು ಎಂದು ಹೇಳಿದನು. ಈ ಕುರಿತು ಮುಅಲ್ಲಿಮ್ ಸಾಹೇಬರು ಹೇಳಿದರು, ಹಝ್ರತ್ ಪೈಗಂಬರ್(ಸ) ತಮ್ಮ ಜೀವಿತಾವಧಿಯಲ್ಲಿ ಒಂದೇ ಒಂದು ಹಜ್ಜ್ ಯಾತ್ರೆ ಮಾಡಿದ್ದಾರೆ ಎಂದು ಹೇಳಿದರು. ಮಸೀದಿಯಲ್ಲಿ ಕುಳಿತಿದ್ದ ಇಮಾಮ್ ಗಾಹೂ ಇತರ ವೃದ್ಧರು ನೀವೆಲ್ಲರೂ ಕಿಡಿಗೇಡಿತನ ಸೃಷ್ಟಿಸುತ್ತಿದ್ದೀರಿ ಎಂದು ಆ ಯುವಕನನ್ನು ಗದರಿಸಿದರು. ಆದರೆ, ಗಲಾಟೆ ಮಾಡಲು ಹೊರಟಿದ್ದ ಜನ ನಾಚಿಕೆಪಟ್ಟು ಸ್ಥಳದಿಂದ ತೆರಳಿದರು. ನಂತರ, ಇಮಾಮ್ ಸಾಹೇಬರು ಜಮಾಅತ್‌ನ ನಿಯೋಗವನ್ನು ತನ್ನ ಮನೆಗೆ ಕರೆದೊಯ್ದರು, ಅಲ್ಲಿ ಅವರನ್ನು ಹೊರತುಪಡಿಸಿ, ಇಬ್ಬರು ಇಮಾಮ್‌ಗಳು ಮತ್ತು ಇನ್ನೂ ಕೆಲವು ಜನರು ಅಲ್ಲಿದ್ದರು, ಹೀಗೆ ನಲ್ವತ್ತು ನಲ್ವತ್ತೆರಡು ಜನರು ಜಮಾಅತಿನ ತಬ್ಲೀಗಿನಿಂದ ಪ್ರಭಾವಿತರಾಗಿ ಬೈಅತ್ ಮಾಡಿದರು ಮತ್ತು ಹೊಸ ಜಮಾಅತ್ ಸ್ಥಾಪನೆಗೊಂಡಿತು.

ಗಿನಿಬಸಾವಿನ ಇಮಾಂ ತಮಾನೆ ಹೇಳುತ್ತಾರೆ: ನೀವು ಹಝ್ರತ್ ಪೈಗಂಬರ್(ಸ), ಪವಿತ್ರ ಖುರ್‌ಆನ್ ಮತ್ತು ಹದೀಸನ್ನು ನಂಬುವುದಿಲ್ಲವೆಂದೇ ಇಂದಿನ ತನಕ ನಾವು ಜಮಾಅತಿನ ಕುರಿತು ಆಲಿಸುತ್ತಾ ಬಂದಿದ್ದೇವೆ. ಇಂದು ನಾವು ಜಲ್ಸದಲ್ಲಿ ನಿಮ್ಮ ಖಲೀಫರನ್ನು ಕಂಡೆವು ಮತ್ತು ಅವರ ಮಾತುಗಳನ್ನು ಆಲಿಸಿದೆವು. ಅವರು ಅಲ್ಲಾಹನ, ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ, ಪವಿತ್ರ ಖುರ್‌ಆನಿನ ಮತ್ತು ಹದೀಸಿನ ಮೂಲಕ ಉಪದೇಶಗಳನ್ನು ನೀಡಿದರು. ಜಮಾಅತಿನ ವಿರುದ್ಧ ಸುಳ್ಳು ಪ್ರಚಾರ ನಡೆಯುತ್ತಿದೆ ಎಂದು ನನಗೆ ಖಚಿತವಾಯಿತು. ದೈವಿಕ ಜಮಾಅತಿನ ವಿರುದ್ಧ ಯಾವಾಗಲೂ ಸುಳ್ಳು ಪ್ರಚಾರ ನಡೆಯುತ್ತದೆ.

ಆದ್ದರಿಂದ ನಾನು ಇಂದು ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸುತ್ತೇನೆ ಮತ್ತು ನನ್ನ ಎಲ್ಲಾ ಜನರಿಗೆ ಜಮಾಅತ್ ಅನ್ನು ಬೋಧಿಸುತ್ತೇನೆ ಎಂದು ಅವರು ಹೇಳುತ್ತಾರೆ. ಅಲ್ಲಾಹನ ಅನುಗ್ರಹದಿಂದ ಅವರೂ ತಬ್ಲೀಗ್ ಮಾಡುತ್ತಿದ್ದಾರೆ ಮತ್ತು ಅವರ ತಬ್ಲೀಗ್‌ದಿಂದ ಹೊಸ ಜಮಾಅತ್‌ಗಳು ಸ್ಥಾಪನೆಯಾಗುತ್ತಿವೆ.

ಹೀಗೆ ಪಾಕಿಸ್ತಾನದಲ್ಲಿರುವ ನಮ್ಮ ವಿರೋಧಿಗಳು ಕೇವಲ ವಿರೋಧಕ್ಕಾಗಿ ವಿರೋಧಿಸದೆ ನಮ್ಮ ಬೋಧನೆಯನ್ನು ಆಲಿಸಿ, ಓದಿ ಮತ್ತು ಅರ್ಥಮಾಡಿಕೊಳ್ಳಬೇಕು. ನಂತರ ಆಕ್ಷೇಪಣೆಯನ್ನು ಮಂಡಿಸಬೇಕು. ಇದನ್ನೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನೀವೆಲ್ಲರು ನನ್ನನ್ನು ವಿರೋಧಿಸುತ್ತೀರಿ ನನ್ನ ಮಾತುಗಳನ್ನು ಮೊದಲು ಆಲಿಸಿರಿ ಎಂದು ಪದೇ ಪದೇ ಹೇಳಿದ್ದಾರೆ. (ಸಿರಾಜ್ ಮುನೀರ್, ರೂಹಾನಿ ಖಝಾಈನ್, ಸಂಪುಟ–12, ಪುಟ–4)

ಲೈಬೇರಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ ವಿರೋಧದ ನಡುವೆಯೂ ಸರ್ವಶಕ್ತನಾದ ಅಲ್ಲಾಹನು ನಮಗೆ ಹೇಗೆ ಸಹಾಯ ಮಾಡುತ್ತಾನೆ. ಎರಡು ವರ್ಷಗಳ ಹಿಂದೆ ನಿಂಬಾ ಕೌಂಟಿಯದ ಒಂದು ಪಟ್ಟಣವಾದ ಗೀನಗಳೆಯ ಕೆಲವು ಜನರು ಅಹ್ಮದಿಯ್ಯತಿಗೆ ಪ್ರವೇಶಿಸಿದರು. ಮೊದಲು ಅವರ ಸಂಬಂಧ ಕ್ರೈಸ್ತ ಧರ್ಮದೊಂದಿಗೆ ಅಥವಾ ನಾಸ್ತಿಕರಾಗಿದ್ದರು. ಬೈಅತಿನ ನಂತರ ಅವರ ತರಬೇತಿ ಮತ್ತು ನಮಾಝಿನ ಏರ್ಪಾಡನ್ನು ಒಂದು ಮನೆಯ ಅಂಗಳದಲ್ಲಿ ಮಾಡಲಾಯಿತು. ಅಲ್ಲಿಯ ಲೋಕಲ್ ಮುಬಲ್ಲಿಗ್ ಆದ ಮುರ್ತಝಾ ಸಾಹಿಬ್‌ರು ನಮಾಝಿನ ನಂತರ ದುಆಗಾಗಿ ಹೇಳುತ್ತಾ ಹೀಗೆ ಹೇಳಿದರು: ಅಲ್ಲಾಹನು ನಮಗೆ ಮಸೀದಿಯನ್ನು ನಿರ್ಮಿಸಲು ಅನುಯೋಜ್ಯವಾದ ಭೂಮಿಯನ್ನು ನೀಡಲಿ. ಈ ಪ್ರದೇಶವು ಕ್ರೈಸ್ತ ಧರ್ಮ ಹಾಗೂ ನಾಸ್ತಿಕರ ಗಡವಾಗಿದೆ ಅಲ್ಲಿನ ಜನರು ಮುಸ್ಲಿಮರನ್ನು ಇಷ್ಟಪಡುವುದಿಲ್ಲ ಆದ್ದರಿಂದ ಅಲ್ಲಿ ಮಸೀದಿ ನಿರ್ಮಿಸಲು ಕಷ್ಟ. ಮಾತುಕತೆ ನಡೆಯುತ್ತಿರುವಾಗಲೇ ಅಲ್ಲಿ ಕುಳಿತುಕೊಂಡಿದ್ದ ಮಿಸ್ಟರ್ ಡಹನ್ ಎಂಬ ನಾಸ್ತಿಕ ವ್ಯಕ್ತಿ ನಿಂತುಕೊಂಡು ಹೇಳಿದರು: ಮಿಶನರಿ ನಮ್ಮ ಗ್ರಾಮಕ್ಕೆ ಬರಲು ಆರಂಭಿಸಿದ ನಂತರ ನಾನು ಅವರ ಬಹಳ ಉತ್ತಮ ಸ್ವಭಾವಗುಣವನ್ನು ಗಮನಿಸಿದ್ದೇನೆ. ಅವರು ಎಲ್ಲರನ್ನು ಭೇಟಿಯಾಗುತ್ತಾರೆ, ಒಂದೇ ಪಾತ್ರೆಯಲ್ಲಿ ಊಟ ಮಾಡುತ್ತಾರೆ. ನಾಸ್ತಿಕನಾಗಿರುವ ಮತ್ತು ಶರಾಬು ಕುಡಿಯುತ್ತಿರುವ ನನ್ನ ಬಳಿಯೂ ಅವರು ಬಂದು ಕುಳಿತುಕೊಳ್ಳುತ್ತಾರೆ ಮತ್ತು ನನ್ನ ಸ್ಥಿತಿಗತಿಗಳ ಬಗ್ಗೆ ಕೇಳುತ್ತಾರೆ. ನಾನು ಈ ರೀತಿಯ ಸ್ವಭಾವ ಬೇರೆಲ್ಲೂ ಕಂಡಿಲ್ಲ.

ನನ್ನ ಬಳಿ ಒಂದು ಪ್ಲಾಟ್ ಇದೆ. ಅಲ್ಲಿ ನಾನು ನನ್ನ ಮನೆಯನ್ನು ನಿರ್ಮಿಸಲು ನಿರ್ಧಾರ ಮಾಡಿದ್ದೆ. ಆದರೆ ಇಂದು ನಾನು ಅದನ್ನು ಮಸೀದಿಗಾಗಿ ನೀಡುತ್ತೇನೆ.

ಕೆಲವು ದಿನಗಳ ನಂತರ ಅವರು ಬೈಅತ್ ಕೂಡ ಮಾಡಿದರು. ಮದ್ಯಪಾನವನ್ನು ಪೂರ್ಣವಾಗಿ ಉಪೇಕ್ಷಿಸಿದರು. ಈ ಪರಿವರ್ತನೆ ಅವರಲ್ಲಿ ಉಂಟಾಯಿತು. ನಿಷ್ಠೆಯಲ್ಲಿ ಅವರು ಅಭಿವೃದ್ಧಿಗೊಳ್ಳುತ್ತಾ ಹೋದರು. ಹೀಗೆ ಮಸೀದಿ ನಿರ್ಮಾಣ ಪೂರ್ಣವಾಯಿತು. ಈ ರೀತಿಯಾಗಿ ಮುಸ್ಲಿಮೇತರರು ಮತ್ತು ನಾಸ್ತಿಕರು ಅಲ್ಲಾಹನ ಅನುಗ್ರಹದಿಂದ ಅಲ್ಲಾಹನ ಅಸ್ತಿತ್ವದ ಮೇಲೆ ದೃಢನಂಬಿಕೆ ಇರಿಸಲು ಆರಂಭಿಸುತ್ತಾರೆ. ಮಾತ್ರವಲ್ಲ ಇಸ್ಲಾಮನ್ನು ಸತ್ಯಧರ್ಮವೆಂದು ತಿಳಿದುಕೊಂಡು ನಂಬುತ್ತಾರೆ.

ನ್ಯಾಂಜಾ ಲ್ಯಾಕ್ ಬುರುಂಡಿಯ ಒಂದು ಪಟ್ಟಣವಿದೆ. ಈ ಪ್ರದೇಶದಲ್ಲಿ ಮುಸ್ಲಿಮರು ಇರುವುದರಿಂದ ಇಲ್ಲಿ ಜಮಾಅತ್ ಗೆ ಸಾಕಷ್ಟು ವಿರೋಧವಿದೆ. ಸುನ್ನಿ ಮಸೀದಿಯ ಇಮಾಮ್ ನಮ್ಮ ಜಮಾಅತ್‌ನ ಮಸೀದಿಯನ್ನು ಮುಚ್ಚಲು ಎಲ್ಲ ರೀತಿಯಿಂದಲೂ ಪ್ರಯತ್ನಿಸಿದನು. ಇದಕ್ಕಾಗಿ ಸರ್ಕಾರಿ ಅಧಿಕಾರಿಗಳನ್ನು ಭೇಟಿ ಮಾಡಿದರೂ ಯಾವುದೂ ಫಲಕಾರಿಯಾಗಲಿಲ್ಲ. ನಮ್ಮ ಮುಅಲ್ಲಿಮ್ ಹಂಝು ಇಂಡುವಿಮಾನ ಸಾಹಿಬ್ ಅವರನ್ನು ಈ ಮಸೀದಿಯ ಇಮಾಮ್ ಅವರು ಪ್ರಶ್ನೋತ್ತರಕ್ಕಾಗಿ ಕರೆದರು. ಪ್ರಶ್ನೋತ್ತರದಲ್ಲಿ, ಈಸ ಮಸೀಹರ ಮರಣದ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಈಸ ಮಸೀಹರ ಮರಣವನ್ನು ಪವಿತ್ರ ಖುರ್‌ಆನ್‌ನ ವಾದಗಳೊಂದಿಗೆ ಮುಅಲ್ಲಿಮ್ ಸಾಹೇಬರು ಸಾಬೀತುಪಡಿಸಿದಾಗ, ಈ ತಥಾಕಥಿತ ವಿದ್ವಾಂಸರು ಉತ್ತರಿಸಲು ಸಾಧ್ಯವಾಗಲಿಲ್ಲ, ಆದರೆ ಮುಅಲ್ಲಿಮ್ ಸಾಹಿಬ್ ಅವರೊಂದಿಗೆ ಜಗಳವಾಡಲು ಪ್ರಾರಂಭಿಸಿದರು ಮತ್ತು ಜಮಾಅತ್‌ನ ಮೇಲೆ ಕಾಫಿರ್ (ಅಪನಂಬಿಕೆ) ನ ಫತ್ವಾವನ್ನು ಹೊರಡಿಸಿದರು. ಇದಾದ ಮೇಲೆ ಒಬ್ಬ ಕ್ರೈಸ್ತನು ಎದ್ದು ನಿಂತು ಜಮಾಅತ್‌ನ ನಿಲುವನ್ನು ಬೆಂಬಲಿಸಿದನು ಮತ್ತು ಅಹ್ಮದಿಯಾ ಜಮಾಅತ್ ಮುಸಲ್ಮಾನರು ಎಂದು ಆ ಮೌಲ್ವಿಗೆ ವಿವರಿಸಿದನು. ನಿಮ್ಮ ಇಸ್ಲಾಂ ಅರ್ಥವಾಗುವುದಿಲ್ಲ. ಆದರೆ ಅವರು ಹೇಳುವುದನ್ನು ಅರ್ಥವಾಗುತ್ತದೆ. ಮತ್ತೊಂದೆಡೆ, ಈ ಮಸೀದಿಯ ಮೌಲವಿಗಳು ಮಸೀದಿಯಲ್ಲಿ ಪರಸ್ಪರ ಹೊಡೆದಾಡಿಕೊಂಡರು ಮತ್ತು ಇದರಿಂದಾಗಿ ಸರ್ಕಾರ ಮಧ್ಯಪ್ರವೇಶಿಸಬೇಕಾಗಿತ್ತು ಮತ್ತು ನಮ್ಮ ಮಸೀದಿಯನ್ನು ಮುಚ್ಚಲು ಬಯಸಿದವರ ಮಸೀದಿಯನ್ನು ಸರ್ಕಾರವು ಮೂರು ತಿಂಗಳ ಕಾಲ ಮುಚ್ಚಿತು. ಅವರ ಪರಿಸ್ಥಿತಿ ಹೇಗಾಯಿತು ಎಂದರೆ ಅವರ ಮಸೀದಿಯನ್ನು ಮುಚ್ಚಲಾಯಿತು.

ಅಹ್ಮದಿಯರ ಮಸೀದಿಗಳನ್ನು ಮುಚ್ಚಬೇಕು, ಮೀನಾರ್ ಮತ್ತು ಮಿಹ್‌ರಾಬನ್ನು ಕೆಡವಿ ಹಾಕಬೇಕು ಎಂಬುದಾಗಿ ಪಾಕಿಸ್ತಾನದ ನಾಮಧಾರಿ ಮುಲ್ಲಾಗಳು ಹೇಳುವ ರೀತಿಯನ್ನು ಈಗ ಎಲ್ಲೆಡೆ ಕೈಗೊಳ್ಳಲಾಗುತ್ತಿದೆ. ಆದರೆ ಅಹ್ಮದಿಯರಿಗೆ ಮೀನಾರನ್ನು ನಿರ್ಮಿಸಲು ಅನುಮತಿ ಇಲ್ಲವೆಂದು ಪಾಕಿಸ್ತಾನದ ಯಾವುದೇ ಕಾನೂನಿನಲ್ಲಿ ಬರೆಯಲಾಗಿಲ್ಲ. ಆದರೂ ಸರ್ಕಾರ ಈ ನಾಮಧಾರಿ ಮೌಲವಿಗಳ ಮುಂದೆ ಮೊಣಕಾಲನ್ನು ಮಡಚಲು ನಿರ್ಬಂಧಿತರಾಗಿದೆ. ಈ ಮೌಲವಿಗಳು ನಷ್ಟಗಳನ್ನು ಉಂಟುಮಾಡಲು ತಮ್ಮ ಪೂರ್ಣ ಪ್ರಯತ್ನವನ್ನು ಮಾಡುತ್ತಾರೆ. ಆದರೆ ಇನ್‌ಶಾ ಅಲ್ಲಾಹ್ ಒಂದು ದಿನ ಇವರೆಲ್ಲರೂ ಸ್ವತಃ ಸಾಯುವರು.

ಪಾಕಿಸ್ತಾನದಲ್ಲಿ, ನಮಗೆ ಪವಿತ್ರ ಖುರ್‌ಆನ್‌ನ ಪ್ರಕಟಣೆಯ ಮೇಲೆ ನಿಷೇಧವಿದೆ. ಅನುವಾದದ ಪ್ರಶ್ನೆಯೇ ಇಲ್ಲ. ನಾಝಿರಾ ಪ್ರಕಟಿಸುವುದು ಕೂಡ ಅಕ್ಷಮ್ಯ ಅಪರಾಧವಾಗಿದೆ. ಆದರೆ ಕೆಲವರಿಗೆ ಶಿಕ್ಷೆಯೂ ಆಯಿತು. ನೀವು ಪವಿತ್ರ ಖುರ್‌ಆನ್ ಏಕೆ ಕೇಳುತ್ತಿದ್ದೀರಿ ಎಂಬ ಪ್ರಕರಣಗಳೂ ದಾಖಲಾಗಿವೆ. ಈಗ ಇದು ಮುಸ್ಲಿಮರೆಂದು ಕರೆಯಲ್ಪಡುವ ಇಸ್ಲಾಂ ಧರ್ಮವಾಗಿದೆ. ಮುಲ್ಲಾಗಳು ಧರ್ಮವನ್ನು ಭ್ರಷ್ಟಗೊಳಿಸಿದ್ದಾರೆ. ಮತ್ತೊಂದೆಡೆ, ಸರ್ವಶಕ್ತನಾದ ಅಲ್ಲಾಹನು ನಮಗೆ ಹೇಗೆ ದಾರಿ ತೆರೆಯುತ್ತಾನೆ? ಪ್ರಪಂಚದ ವಿವಿಧ ದೇಶಗಳಲ್ಲಿ ನಾವು ಪವಿತ್ರ ಖುರ್‌ಆನ್ ಅನ್ನು ಹೇಗೆ ಪ್ರಕಟಿಸುತ್ತಿದ್ದೇವೆ? ನಮ್ಮ ಖುರ್‌ಆನ್‌ಗಳು ಎಲ್ಲೆಡೆ ಹೇಗೆ ಪ್ರೀತಿಸಲ್ಪಡುತ್ತವೆ, ಅದರಲ್ಲೂ ಯಾವುದೇ ಭಾಷೆಯಲ್ಲಿ ಮಾಡಿದ ಅನುವಾದವು ಜನರ ಗಮನವನ್ನು ಸೆಳೆಯುತ್ತದೆ.

ತಾಂಜಾನಿಯಾದ ದಾರುಸ್ಸಲಾಮ್‌ನ ಮುಅಲ್ಲಿಮ್ ಒಬ್ಬರು ಹೇಳುತ್ತಾರೆ: ಅವರು ಕರಪತ್ರಗಳನ್ನು ಹಂಚಲು ಒಂದು ಪ್ರದೇಶಕ್ಕೆ ಹೋಗಿದ್ದರು. ಜಮಾಅತ್‌ನ ಪುಸ್ತಕಗಳನ್ನು ಸಹ ಮಾರಾಟ ಮಾಡುತ್ತಾರೆ. ಇದರಿಂದ ತಬ್ಲೀಗಿ ಸಂಪರ್ಕಗಳನ್ನು ಹೆಚ್ಚಿಸುತ್ತದೆ. ಒಂದು ದಿನ ನನಗೆ ಮೂವತ್ತು ಕಿಲೋಮೀಟರ್ ದೂರದಿಂದ ಜಮಾಅತ್ ಅಲ್ಲದ ವ್ಯಕ್ತಿಯೊಬ್ಬರು ಫೋನ್ ಮಾಡಿ ಅವರಿಗೆ ಪವಿತ್ರ ಖುರ್‌ಆನ್‌ನ ಸ್ವಾಹಿಲಿ ಭಾಷಾಂತರವನ್ನು ಖರೀದಿಸಲು ಬಯಸಿದ್ದರು. ಅದಕ್ಕೆ ಮುಅಲ್ಲಿಮ್ ಸಾಹಿಬ್ ಹೇಳಿದರು

ನಿಮ್ಮ ಸಮೀಪದಲ್ಲಿಯೇ ಪವಿತ್ರ ಖುರ್‌ಆನ್‌ನ ಸ್ವಾಹೀಲಿ ಭಾಷಾಂತರವು ಲಭಿಸುತ್ತದೆ ಎಂದು, ಆದರೆ ಈ ವ್ಯಕ್ತಿಯು ಜಮಾತ್‌ನ ಅನುವಾದ ಮತ್ತು ವ್ಯಾಖ್ಯಾನದ ರೀತಿಯನ್ನು ತುಂಬಾ ಇಷ್ಟಪಡುತ್ತೇನೆ ಎಂದು ಹೇಳಿದರು. ಒಳ್ಳೆಯದು, ಇತರರು ಸಹ ಮಾಡಿದ್ದಾರೆ (ಅನುವಾದಗಳು), ಆದರೆ ನಾನು ಜಮಾಅತ್‌ನ ಭಾಷಾಂತರದ ವಿಧಾನವನ್ನು ಇಷ್ಟಪಡುತ್ತೇನೆ ಏಕೆಂದರೆ ಸಾಮಾನ್ಯ ಜ್ಞಾನವು ಅದನ್ನು ಸ್ವೀಕರಿಸುತ್ತದೆ. ನಾನು ಈ ಅನುವಾದವನ್ನು ಪಡೆಯಲು ಬಯಸುತ್ತೇನೆ.

ಮಾಲಿಯ ಮುಬಲ್ಲಿಗ್ ಬಿಲಾಲ್ ಸಾಹಿಬ್ ಇದ್ದಾರೆ. ಅವರು ಹೇಳುತ್ತಾರೆ: ಪವಿತ್ರ ಖುರ್‌ಆನ್‌ನ ಪ್ರದರ್ಶನವನ್ನು ಆಯೋಜಿಸಲು ಅಹ್ಮದಿಯಾ ಜಮಾತ್‌ಗೆ ಅವಕಾಶ ಲಭಿಸಿತು. ಒಬ್ಬ ವಿದ್ಯಾರ್ಥಿಯು ಸ್ಟಾಲ್‌ಗೆ ಬಂದು ಪವಿತ್ರ ಖುರ್‌ಆನ್‌ನ ಫ್ರೆಂಚ್ ಅನುವಾದವನ್ನು ಪರಿಚಯಿಸಿದರು, ಪ್ರಸ್ತುತ ಇರುವ ಅನುವಾದಗಳಲ್ಲಿ ಜಮಾಅತ್‌ನ ಫ್ರೆಂಚ್ ಅನುವಾದವು ಅತ್ಯುತ್ತಮವಾಗಿದೆ ಎಂದು ಹೇಳಿದರು. ಈ ಕುರಿತು ತಮ್ಮ ಮನೆಯಲ್ಲೂ ಪವಿತ್ರ ಖುರ್‌ಆನ್ ಭಾಷಾಂತರವಿದ್ದು, ಜಮಾಅತ್‌ನ ಅನುವಾದಕ್ಕಿಂತ ಉತ್ತಮವಾಗಿದೆ ಎಂದರು. ಅದಕ್ಕೆ ಈ ಯುವಕ ಹೇಳಿದನು. ಆದರೂ, ಆತನು ಅವರ ಮನೆಗೆ ಹೋಗಿ ಅಲ್ಲಿಂದ ಪವಿತ್ರ ಖುರ್‌ಆನ್ ತಂದು ನಮ್ಮ ಭಾಷಾಂತರವಾದ ಅಹ್ಮದೀಯರಲ್ಲದವರು ಉತ್ತಮ ಎಂದು ವಿವರಿಸುತ್ತಾ ಒಂದು ಗಂಟೆಗೂ ಹೆಚ್ಚು ಕಾಲ ಕಳೆದನು. ಎರಡು ಭಾಷಾಂತರಗಳನ್ನು ಹೋಲಿಕೆ ಮಾಡುತ್ತಲೇ ಇದ್ದರು. ಆದಾಗ್ಯೂ, ಅವರು ನ್ಯಾಯೋಚಿತ ಸ್ವಭಾವವನ್ನು ಹೊಂದಿದ್ದರು. ಅಂತಿಮವಾಗಿ ಅವರು ಜಮಾಅತ್‌ನ ಭಾಷಾಂತರವು ತುಂಬಾ ಶ್ರೇಷ್ಠವಾಗಿದೆ ಮತ್ತು ವಾಸ್ತವವಾಗಿ ಇದು ಪವಿತ್ರ ಖುರ್‌ಆನ್ ಅನ್ನು ಅರ್ಥಮಾಡಿಕೊಳ್ಳಲು ತುಂಬಾ ಸುಲಭವಾಗಿದೆ ಎಂದು ಹೇಳಲು ಒಪ್ಪಿಕೊಂಡರು ಮತ್ತು ನಂತರ ಅವರು ಪವಿತ್ರ ಖುರ್‌ಆನ್‌ನ ಪ್ರತಿಯನ್ನು ಖರೀದಿಸಿದರು ಮತ್ತು ಅದನ್ನು ತಮ್ಮೊಂದಿಗೆ ತೆಗೆದುಕೊಂಡರು.

ಇಸ್ಲಾಮಿನ ನೈಜ ಪಾಠ ಮತ್ತು ಅಲ್ಲಾಹನ ಮೇಲಿನ ವಿಶ್ವಾಸ ಹೇಗೆ ಜಮಾಅತಿನ ಅಧ್ಯಾಪನೆಗಳ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಸಾಹಿತ್ಯಗಳ ಮೂಲಕ ಮುಸ್ಲಿಮರಲ್ಲೂ ಪ್ರಭಾವ ಬೀರುತ್ತದೆ ಎಂಬುದಕ್ಕೆ ಒಂದು ಘಟನೆಯನ್ನು ವಿವರಿಸುತ್ತೇನೆ. ಜೋಹಾಟ್ ಬುಕ್‌ಫೇರಿನ ಸಂದರ್ಭದಲ್ಲಿ ಜಲೀಮಸ್ ಸಾಹಿಬ್ ಎಂಬ ಒಬ್ಬ ವ್ಯಕ್ತಿ ಬಂದರು. ಅವರು ಕಮ್ಪ್ಯೂಟರ್ ಇಂಜಿನೀಯರ್ ಆಗಿದ್ದಾರೆ. ಅವರು ಸ್ಟಾಲಿನಲ್ಲಿದ್ದ ಹಝ್ರತ್ ಮಸೀಹ್ ಮೌಊದ್(ಅ)ರ ಫೋಟೋ ಮತ್ತು ಜಮಾಅತಿನ ಗ್ರಂಥಗಳನ್ನು ನೋಡಲು ಆರಂಭಿಸಿದರು. ಸ್ವಲ್ಪ ಸಮಯದ ನಂತರ ಅವರು ಡ್ಯೂಟಿಯಲ್ಲಿದ್ದ ಮುಬಲ್ಲಿಗ್‌ರೊಡನೆ ತೇವಭರಿತ ಕಣ್ಣುಗಳೊಂದಿಗೆ ಸಂಬೋಧಿಸುತ್ತಾ ಹೇಳಿದರು: ನಾನು ಇಂದು ಮುಸ್ಲಿಮನಾಗಿ ನಿಮ್ಮ ಮುಂದೆ ನಿಂತಿರುವುದಕ್ಕೆ ಕಾರಣ ಅಹ್ಮದಿಯಾ ಜಮಾಅತ್ ಆಗಿದೆ. ನನ್ನ ಮೇಲೆ ಜಮಾಅತಿನ ಬಹಳ ದೊಡ್ಡ ಔದಾರ್ಯವಿದೆ. ಮುಬಲ್ಲಿಗ್ ಕೇಳಿದರು: ನೀವು ಅಹ್ಮದಿಯೇ? ನಿಮ್ಮ ಮೇಲೆ ಜಮಾಅತಿನ ಔದಾರ್ಯವೇನು? ಅವರು ಹೇಳಿದರು: ನಾನು ಅಹ್ಮದಿಯಲ್ಲ. ಆದರೆ ನಾನು ಧರ್ಮದಿಂದ ದೂರವಾಗುತ್ತಾ ನಾಸ್ತಿಕನಾಗಿ ಬಿಟ್ಟಿದ್ದೆ. ಆದರೆ ನನ್ನ ಮನೆಯಲ್ಲಿ ನನ್ನ ತಂದೆಯ ಬಳಿ ಅಹ್ಮದಿಯಾ ಜಮಾಅತಿನ ಕೆಲವು ಹಳೆಯ ಗ್ರಂಥಗಳಿದ್ದುವು. ಅವುಗಳು ಹಝ್ರತ್ ಮಸೀಹ್ ಮೌಊದ್(ಅ)ರ ಗ್ರಂಥಗಳಾಗಿದ್ದುವು. ಆ ಗ್ರಂಥಗಳನ್ನು ನಾನು ಓದಿದೆ. ಅದರಲ್ಲಿ ಅಲ್ಲಾಹನ ಅಸ್ತಿತ್ವದ ಬಗ್ಗೆ ನೀಡಲಾದ ಪುರಾವೆಗಳು ನನ್ನ ಕಣ್ಣುಗಳನ್ನು ತೆರೆಸಿದುವು. ನನಗೆ ಅಲ್ಲಾಹನ ಅಸ್ತಿತ್ವದ ಮೇಲೆ ದೃಢನಂಬಿಕೆ ಉಂಟಾಯಿತು. ಈ ರೀತಿಯಾಗಿ ಅಹ್ಮದಿಯಾ ಜಮಾಅತಿನ ಸಾಹಿತ್ಯಗಳ ಮೂಲಕ ನಾಸ್ತಿಕರು ಕೂಡ ತಮ್ಮ ವಿಶ್ವಾಸವನ್ನು ಪುನಃ ನೆಲೆನಿಲ್ಲಿಸುತಿದ್ದಾರೆ. ಈಗ ನಾನು ಅಹ್ಮದಿಯಾ ಜಮಾಅತ್‌ನ ವೆಬ್‌ಸೈಟ್ ಅನ್ನು ಅಧ್ಯಯನ ಮಾಡುತ್ತಿದ್ದೇನೆ ಎಂದು ಹೇಳಿದರು. ಇಸ್ಲಾಂ ಧರ್ಮವನ್ನು ಬೆಂಬಲಿಸಿ ಜಮಾಅತ್ ಅಹ್ಮದಿಯಾ ಮಂಡಿಸಿದ ವಾದಗಳು ನನ್ನ ನಂಬಿಕೆಯನ್ನು ಬಲಪಡಿಸುತ್ತವೆ ಮತ್ತು ನನ್ನ ಜ್ಞಾನವನ್ನು ಹೆಚ್ಚಿಸುತ್ತವೆ. ಅಹ್ಮದೀಯ ಜಮಾಅತ್‌ನಿಂದಾಗಿ ನಾನು ಇಂದು ಮುಸಲ್ಮಾನನಾಗಿದ್ದೇನೆ.

ಪಾಶ್ಚಿಮಾತ್ಯ ಜಗತ್ತಿನಲ್ಲಿ, ಕೆಲವು ದೇಶಗಳಲ್ಲಿ ಪವಿತ್ರ ಖುರ್‌ಆನ್ ಅನ್ನು ಅವಮಾನಿಸಲಾಗುತ್ತಿದೆ, ಸ್ವೀಡನ್, ಡೆನ್ಮಾರ್ಕ್ ಇತ್ಯಾದಿಗಳಲ್ಲಿ ಇಸ್ಲಾಂ ಧರ್ಮದ ಸುಂದರವಾದ ಬೋಧನೆಗಳನ್ನು ಪ್ರಸ್ತುತಪಡಿಸಿದಾಗ, ಈ ವಿರೋಧಿಗಳ ವರ್ತನೆಗಳು ಬದಲಾಗುತ್ತವೆ. ಆದ್ದರಿಂದ ಇಂದು ಅಹ್ಮದಿಯಾ ಸಮುದಾಯವೇ ಪವಿತ್ರ ಖುರ್‌ಆನ್‌ನ ಶ್ರೇಷ್ಠತೆ ಮತ್ತು ಸ್ಥಾನಮಾನವನ್ನು ಹೆಚ್ಚಿಸಲು ಮತ್ತು ಅದರ ನಿಜವಾದ ಬೋಧನೆಗಳನ್ನು ಹೇಳಲು ಪ್ರಯತ್ನಿಸುತ್ತಿದೆ.

ಓರ್ವ ಜರ್ಮನ್ ಮಹಿಳೆ ಹೇಳುತ್ತಾರೆ: ಜಮಾಅತ್ತಿನ ಸಾಹಿತ್ಯ ಮತ್ತು ಪವಿತ್ರ ಖುರ್‌ಆನ್‌ನ ಪ್ರದರ್ಶನವಿತ್ತು. ಪ್ರದರ್ಶನವು ಇಸ್ಲಾಂ ಧರ್ಮದ ಬಗ್ಗೆ ವಿವಿಧ ವಿಷಯಗಳ ಕುರಿತು ಪವಿತ್ರ ಖುರ್‌ಆನ್ ಮತ್ತು ಹದೀಸ್‌ನ ಉಲ್ಲೇಖಗಳನ್ನು ಒಳಗೊಂಡಿತ್ತು, ಇಸ್ಲಾಂ ಉಗ್ರಗಾಮಿ ಧರ್ಮವಲ್ಲ ಎಂದು ತೋರಿಸುವ ವಿಷಯಗಳ ಉಲ್ಲೇಖಗಳನ್ನು ಒಳಗೊಂಡಿತ್ತು. ನಿಮ್ಮ ಜಮಾಅತ್ ಇಸ್ಲಾಂ ಧರ್ಮವನ್ನು ಸರಳೀಕರಿಸಿ ನಮಗೆ ಪ್ರಸ್ತುತಪಡಿಸಿದೆ ಎಂದು ಈ ಮಹಿಳೆ ಹೇಳಿದರು. ಈಗ ಇಸ್ಲಾಂ ಧರ್ಮವನ್ನು ವಿರೋಧಿಸಲು ಮತ್ತು ಪವಿತ್ರ ಖುರ್‌ಆನ್ ಅನ್ನು ವಿರೋಧಿಸಲು ಯಾವುದೇ ಕಾರಣವಿಲ್ಲ.

ಪವಿತ್ರ ಖುರ್‌ಆನಿನ ಪ್ರಕಾಶನ ಮತ್ತು ಇಸ್ಲಾಮಿನ ಬೋಧನೆಗಳ ಕುರಿತು ಇರುವ ಸಾಹಿತ್ಯಗಳು ಜನರ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ ಎಂಬುದರ ಕುರಿತು ಇನ್ನಷ್ಟು ಘಟನೆಗಳನ್ನು ಮುಂದಿರಿಸುತ್ತೇನೆ. ಗೋಲಾಘಾಟಿನ ಬುಕ್‌ಫೇರಿನ ವೇಳೆ ಮುಸ್ಲಿಮ್ ಪ್ರೊಫೆಸ್ಸರ್ ಆದ ಶಬಾನ ಯಾಸ್ಮೀನ್ ಸಾಹಿಬ ನಮ್ಮ ಬುಕ್ ಸ್ಟಾಲನ್ನು ನೋಡಿದಾಗ ಬಹಳ ಸಂತೋಷಗೊಂಡರು ಮತ್ತು ನೇರವಾಗಿ ಬಂದು ಪವಿತ್ರ ಖುರ್‌ಆನಿನ ಅಸ್ಸಾಮಿ ತರ್ಜುಮೆಯನ್ನು ಕೈಯಲ್ಲಿ ಎತ್ತಿದರು. ತನ್ನ ಜೊತೆಗೆ ಇದ್ದ ಪ್ರೊಫೆಸರ್ ಸಾಹಿಬ್‌ರೊಡನೆ ಹೀಗೆ ಹೇಳಿದರು: ಇಂದು ನನ್ನ ಕನಸು ಈಡೇರಿದೆ. ನಾನು ದೀರ್ಘಕಾಲದಿಂದ ಪವಿತ್ರ ಖುರ್‌ಆನಿನ ಅಸ್ಸಾಮಿ ತರ್ಜುಮೆಯನ್ನು ಹುಡುಕುತ್ತಿದ್ದೆ. ಪವಿತ್ರ ಖುರ್‌ಆನಿನ ಅಸ್ಸಾಮಿ ತರ್ಜುಮೆ ಬೇಕೆಂದು ನನ್ನ ಅಧ್ಯಾಪಕರೊಬ್ಬರು ಪದೇ ಪದೇ ಹೇಳುತ್ತಿದ್ದರು. ಆದರೆ ನನ್ನ ಬಳಿ ಪವಿತ್ರ ಖುರ್‌ಆನಿನ ಅಸ್ಸಾಮಿ ತರ್ಜುಮೆ ಇರದ ಕಾರಣದಿಂದ ಅವರಿಗೆ ನನ್ನಿಂದ ಕೊಡಲಾಗಲಿಲ್ಲ. ಆದ್ದರಿಂದ ನನಗೆ ಬಹಳ ಲಜ್ಜೆಯಾಗುತ್ತಿತ್ತು. ಮುಸ್ಲಿಮಳಾಗಿದ್ದೇನೆ ಎಂಬುದರ ಬಗ್ಗೆ ಖೇದವಾಗುತ್ತಿತ್ತು. ನನ್ನ ಅಧ್ಯಾಪಕರ ನಿಧನದ ನಂತರ ಇಂದು ನನಗೆ ಈ ಪವಿತ್ರ ಖುರ್‌ಆನ್ ಲಭಿಸಿದೆ.

ಮುಸ್ಲಿಮರಿಗೆ ಪವಿತ್ರ ಖುರ್‌ಆನ್ ಮತ್ತು ಇತರ ಮೂಲ ಇಸ್ಲಾಮಿಕ್ ಪುಸ್ತಕಗಳಿಲ್ಲದ ಇಂತಹ ದೂರದ ಪ್ರದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಪುಸ್ತಕ ಮಳಿಗೆಗಳನ್ನು ಸ್ಥಾಪಿಸುವ ಮೂಲಕ ಅವರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಅಗತ್ಯಗಳನ್ನು ಪೂರೈಸುತ್ತಿರುವುದು ಸರ್ವಶಕ್ತನಾದ ಅಲ್ಲಾಹನ ಕೃಪೆಯೇ ಆಗಿದೆ.

ಧೀಮಾಜಿ ಬುಕ್ ಫೇರಿಗೆ ಬಾನ್ತಿ ದೂಬಾರಾಸ್ ಎಂಬ ಹೆಸರಿನ ಹಿಂದು ಮಹಿಳೆಯೊಬ್ಬಳು ಬಂದಿದ್ದರು. ಇವರು ಲಾರ್ಡ್ ಶಿವನ ಮಂದಿರವನ್ನು ಕಟ್ಟುತ್ತಿದ್ದಾರೆ ಮತ್ತು ಅದರ ಪ್ರಚಾರ ನಡೆಸುತ್ತಿದ್ದಾರೆ. ಮುಸ್ಲಿಮರು ಬಹಳ ಕಡಿಮೆ ಸಂಖ್ಯೆಯಲ್ಲಿರುವ ಜಾಗದಲ್ಲಿ ಇಸ್ಲಾಮಿನ ಸ್ಟಾಲನ್ನು ಹಾಕಲಾಗಿದೆ ಎಂಬುದನ್ನು ನೋಡಿದಾಗ ಅವರು ಬಹಳ ಆಶ್ಚರ್ಯಚಕಿತರಾದರು. ಅವರು ನಮ್ಮ ಸ್ಟಾಲಿಗೆ ಬಂದು ಮಾತುಕತೆ ನಡೆಸಿದರು ಮತ್ತು ಬಹಳ ಸಂತೋಷಗೊಂಡು ಮರಳಿ ಹೋದರು. ಮರುದಿನ ಅವರು ಪುನಃ ಮರಳಿ ಬಂದರು. ಸ್ಟಾಲಿನಲ್ಲಿದ್ದ ಎಲ್ಲರಿಗಾಗಿ ಹಣ್ಣುಹಂಪಲು ಇತ್ಯಾದಿಗಳನ್ನು ತಂದಿದ್ದರು. ಪವಿತ್ರ ಖುರ್‌ಆನನ್ನು ನೋಡಿ ಅವರು ಬಹಳ ಸಂತೋಷಗೊಂಡರು. ಇಂದು ನನ್ನ ಜೀವಿತದ ಒಂದು ಕನಸ್ಸನ್ನು ನೀವು ಈಡೇರಿಸಿದ್ದೀರಿ ಎಂದು ಪವಿತ್ರ ಖುರ್‌ಆನ್ ಖರೀದಿ ಮಾಡುವಾಗ ಅವರು ಹೇಳಿದರು. ಅವರು ಪವಿತ್ರ ಖುರ್‌ಆನ್ ಅನ್ನು ಖರೀದಿಸಿ ಅದನ್ನು ತಮ್ಮ ಎದೆಯ ಮೇಲೆ ಇಟ್ಟುಕೊಂಡು ಅದರೊಂದಿಗೆ ಚಿತ್ರ ತೆಗೆದುಕೊಂಡರು.

ಚೆಕ್ ರಿಪಬ್ಲಿಕ್ ಎಂಬುದು ಯೂರೋಪಿನ ಒಂದು ದೇಶವಾಗಿದೆ. ಅಲ್ಲಿಯ ಮುಬಲ್ಲಿಗ್ ಸಾಹಿಬ್‌ರು ಹೇಳುತ್ತಾರೆ: ಒಬ್ಬ ಯುವಕ ನಮ್ಮ ಸ್ಟಾಲಿಗೆ ಬಂದರು. ಆತನು ಹೇಳಿದನು: ಅಲ್ಲಾಹನು ಇದ್ದಾನೆ ಎಂಬ ನಿಲುವಿಗೆ ನಾನು ಬಂದಿದ್ದೇನೆ. ಆದರೆ ಯಾವ ಧರ್ಮ ನನ್ನನ್ನು ಅಲ್ಲಾಹನ ತನಕ ತಲುಪಿಸುವುದು ಎಂದು ಗೊತ್ತಾಗುತ್ತಿರಲಿಲ್ಲ. ನಾನು ಅನೇಕ ಕಾಲದ ತನಕ ಅನೇಕ ಧರ್ಮಗಳ ಬಗ್ಗೆ ಪೂರ್ಣವಾಗಿ ಅವಲೋಕನ ನಡೆಸಿದ್ದೇನೆ. ಅಹ್ಮದಿಯಾ ಜಮಾಅತ್ ಮಾತ್ರವೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿದೆ ಎಂದು ನನಗೆ ಈಗ ಮನವರಿಕೆ ಆಗಿದೆ. ಅದರ ಮೂಲಕ ನನ್ನ ಹೃದಯ ಮತ್ತು ಮನಸ್ಸಿಗೆ ಸಮಾಧಾನ ಲಭಿಸುತ್ತಿದೆ. ನನಗೆ ಇಲ್ಲಿ ಆಧ್ಯಾತ್ಮಿಕತೆಯ ಅನುಭವವಾಗುತ್ತಿದೆ.

ಈಗ ಹೇಳಿ, ಈ ಜನರು, ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ಜನರ ಹೃದಯ ಮತ್ತು ಮನಸ್ಸಿಗೆ ತಲುಪಿಸುವವರು ಯಾರು? ತಬ್ಲೀಗ್ (ಧರ್ಮೋಪದೇಶದ) ನ ಮಾರ್ಗವನ್ನು ತೆರೆಯಲು ಅಲ್ಲಾಹನು ಹೇಗೆ ಸಾಧನಗಳನ್ನು ಸೃಷ್ಟಿಸುತ್ತಾನೆ ಎಂಬ ನಂಬಿಕೆಯನ್ನು ಪ್ರೇರೇಪಿಸುವ ಘಟನೆಗಳೂ ಇವೆ. ಪಾಕಿಸ್ತಾನದಲ್ಲಿ, ನಮ್ಮನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ, ಆದರೆ ಕೆಲವು ಇತರ ಸ್ಥಳಗಳಲ್ಲಿ, ಕೆಲವು ನಿರ್ಬಂಧಗಳ

ಹೊರತಾಗಿಯೂ, ಸರ್ವಶಕ್ತನಾದ ಅಲ್ಲಾಹನು ವಿಷಯಗಳನ್ನು ಸುಲಭಗೊಳಿಸುತ್ತಾನೆ.

ಗಿನಿಯಾ-ಬಿಸ್ಸೌನ ಮುಬಲ್ಲಿಗ್ ಬರೆಯುತ್ತಾರೆ. ಕಳೆದ ಡಿಸೆಂಬರ್‌ನಲ್ಲಿ ಕೇಪ್ ವರ್ಡ್ ಐಲ್ಯಾಂಡ್‌ಗೆ ನಾವು ಭೇಟಿ ನೀಡಿದಾಗ, ಜಮಾಅತ್‌ನ ಸಂದೇಶವನ್ನು ತ್ವರಿತವಾಗಿ ತಲುಪಿಸಲು ಸಹಾಯ ಮಾಡುವ ರೇಡಿಯೊ ಕಾರ್ಯಕ್ರಮವನ್ನು ನಮ್ಮ ಜಮಾಅತ್‌ಗೆ ಹೊಂದುವ ಅವಶ್ಯಕತೆಯಿದೆ ಎಂದು ನಾವು ಭಾವಿಸಿದ್ದೇವೆ, ಆದರೆ ಹಲವಾರು ಪ್ರಯತ್ನಗಳ ಹೊರತಾಗಿಯೂ ಜಮಾಅತ್ ಅಲ್ಲಿ ನೋಂದಾಯಿಸಲು ಸಾಧ್ಯವಾಗಲಿಲ್ಲ. ಆದ ಕಾರಣ ರೇಡಿಯೋ ಕಾರ್ಯಕ್ರಮವು ನಡೆಸಲು ಅವಕಾಶ ಲಭಿಸಲಿಲ್ಲ. ಅವರು ಹೇಳುತ್ತಾರೆ: ಪ್ರವಾಸವು ಪೂರ್ಣಗೊಂಡ ನಂತರ, ಗಿನಿಯಾ-ಬಿಸ್ಸಾವ್‌ನಿಂದ ಕೇಪ್ ವರ್ಡೆಗೆ ಅನೇಕ ಕರಪತ್ರಗಳನ್ನು ಮುದ್ರಿಸಿ ಕಳುಹಿಸಲಾಯಿತು. ಅಲ್ಲಿ ಅವುಗಳನ್ನು ಆಗಾಗ್ಗೆ ಹಂಚಲಾಗುತ್ತಿತ್ತು ಮತ್ತು ಕರಪತ್ರವನ್ನು ಓದಿದ ನಂತರ ಸ್ನೇಹಿತರೊಬ್ಬರು ಜಮಾಅತ್‌ನ ಮಿಷನ್‌ಗೆ ಕರೆ ಮಾಡಿ ಜಮಾಅತ್ ಬಗ್ಗೆ ತಿಳಿದುಕೊಳ್ಳಬೇಕೆಂದು ಹೇಳಿದರು. ಅವರು ಭೇಟಿಯಾದದ್ದು ಹೀಗೆ. ಅವರಿಗೆ ಜಮಾಅತ್ ಬಗ್ಗೆ ತಿಳಿಸಲಾಯಿತು. ಅವರು ಹೇಳಿದರು, ನೀವು ರೇಡಿಯೊದಲ್ಲಿ ನಿಮ್ಮ ಬೋಧನೆಗಳನ್ನು ಏಕೆ ಹಂಚಿಕೊಳ್ಳಬಾರದು? ಈ ಕುರಿತು ನಾವು ಪ್ರಯತ್ನಿಸುತ್ತಿದ್ದೇವೆ ಆದರೆ ನಮಗೆ ರೇಡಿಯೋ ಕಾರ್ಯಕ್ರಮಗಳು ಸಿಗುತ್ತಿಲ್ಲ ಎಂದು ಹೇಳಲಾಯಿತು. ಈ ಬಗ್ಗೆ ಆ ವ್ಯಕ್ತಿ ನನ್ನ ಸ್ವಂತ ರೇಡಿಯೋ ಸ್ಟೇಷನ್ ಅನ್ನು ಹೊಂದಿದ್ದೇನೆ ಎಂದು ಹೇಳಿದರು. ನಾನು ಆಕಾಶವಾಣಿ ಕೇಂದ್ರದ ನಿರ್ದೇಶಕನಾಗಿದ್ದೇನೆ. ನೀವು ನನ್ನ ರೇಡಿಯೊದಲ್ಲಿ ಕಾರ್ಯಕ್ರಮ ಮಾಡಬಹುದು ಮತ್ತು ಜಮಾಅತ್‌ನ ಸಂದೇಶವನ್ನು ತಿಳಿಸಬಹುದು. ಹೀಗೆ ಅಲ್ಲಾಹನು ಹೊಸ ಹೊಸ ಮಾರ್ಗಗಳನ್ನು ತೆರೆಯುತ್ತಾನೆ.

ನಂತರ ಮಾಲಿಯ ಮುಬಲ್ಲಿಗರು (ಬೋಧಕರು) ಬರೆಯುತ್ತಾರೆ: ಮಾಲಿಯಲ್ಲಿ ನಡೆದ ಜಲ್ಸ ಸಾಲಾನಕ್ಕೆ ಕೋಲಿ ಕುರು ಪ್ರದೇಶದ ಹಳ್ಳಿಯೊಂದರಿಂದ ಸ್ನೇಹಿತ ಅಹ್ಮದ್ ಟೂರೆ ಸಾಹಿಬ್ ಎಂಬವರು ಆಗಮಿಸಿದ್ದರು. ಅವರು ಹೇಳಿದರು, ಪ್ರಸ್ತುತ ಮಾಲಿಯಲ್ಲಿ ಒಂದು ಪಂಥವಿದೆ, ಅದು ನಮಾಝ್ ಮತ್ತು ಇಸ್ಲಾಂನ ಮೂಲ ಸ್ಥಂಭಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದಿಲ್ಲ. ಈಗ ನಮಾಝ್‌ಗೆ ಪ್ರಾಮುಖ್ಯತೆ ನೀಡದ ಈ ಪಂಥ ಮತ್ತು ಇಸ್ಲಾಂ ಧರ್ಮದ ಮೂಲ ಸ್ಥಂಬಗಳನ್ನು ಅನುಸರಿಸುವುದಿಲ್ಲ ಆದರೆ ಅವರು ಮುಸಲ್ಮಾನರಾಗಿದ್ದಾರೆ. ಅಹ್ಮದಿಯರು ಇನ್ನೂ ಮುಸ್ಲಿಮೇತರರು. ಅವರು ಹೇಳಿದರು ಅವರು ಈ ಪಂಥದ ಸದಸ್ಯರಾಗಿದ್ದಾರೆ, ಆದರೆ ಅವರ ಹೃದಯವು ತೃಪ್ತಿಯಾಗಲಿಲ್ಲ. ಅವರು ಒಳ್ಳೆಯ ಸ್ವಭಾವವನ್ನು ಹೊಂದಿದ್ದರು. ಅವರು ಹೇಳುತ್ತಾರೆ ಖಂಡಿತವಾಗಿಯೂ ನಾವು ಹೇಳುವುದೇನೆಂದರೆ ಇಸ್ಲಾಮ್‌ನ ಮೂಲ ಸ್ತಂಬಗಳ ಅಗತ್ಯವಿಲ್ಲ. ಮತ್ತು ಈಮಾನ್ ಹಾಗೂ ನಮಾಝ್ ನಿರ್ವಹಿಸುವ ಅವಶ್ಯಕತೆ ಇಲ್ಲ ಆದರೆ ನನ್ನ ಹೃದಯವು ಅದರಲ್ಲಿ ತೃಪ್ತಿ ಹೊಂದಿಲ್ಲ. ಒಂದು ದಿನ ಅವರು ರೇಡಿಯೊವನ್ನು ಆನ್ ಮಾಡಿದರು ಮತ್ತು ಅದು ಅಹ್ಮದೀಯ ಸಮುದಾಯದ ರೇಡಿಯೋ ಆಗಿತ್ತು, ಅದರಲ್ಲಿ ನಮಾಝ್‌ನ ವಿಧಾನವನ್ನು ಕಲಿಸುತ್ತಿದ್ದರು, ಅದನ್ನು ಅವರು ಬಹಳ ಆಸಕ್ತಿಯಿಂದ ಕೇಳಿದರು ಮತ್ತು ನಂತರ ಅವರು ಸಮುದಾಯದ ರೇಡಿಯೊವನ್ನು ಮತ್ತೆ ಮತ್ತೆ ಕೇಳಿದರು, ಆದ್ದರಿಂದ ಅವರು ಈ ಜನರು (ಅಹ್ಮದಿಯಾರು) ನಿಜವಾದ ಮುಸ್ಲಿಮರು ಎಂದು ಅವರ ಹೃದಯದಲ್ಲಿ ಮನವರಿಕೆಯಾಯಿತು ಆದರೆ ಹಳ್ಳಿಗರು ಎಲ್ಲಾ ವಿದ್ವಾಂಸರು ಅವರನ್ನು ಇಸ್ಲಾಂನಿಂದ ಹೊರಗಿಟ್ಟಿದ್ದಾರೆ ಎಂದು ಹೇಳಿದರು. ಅವರು ಹೇಳುತ್ತಾರೆ ನಾನು ಇಲ್ಲಿ ಜನರು ನಮಾಝ್ ನಿರ್ವಹಿಸುತ್ತಾ ತಹಜ್ಜುದ್ ನಿರ್ವಹಿಸುವುದನ್ನು ನೋಡಿದ್ದೇನೆ, ಆದ್ದರಿಂದ ನನ್ನ ಹೃದಯವು ತೃಪ್ತಿಗೊಂಡಿತು. ನನಗೆ ಧರ್ಮದ ಬಗ್ಗೆ ಹೆಚ್ಚು ತಿಳಿದಿಲ್ಲ, ಆದರೆ ನನಗೆ ಇಸ್ಲಾಂ ಧರ್ಮದ ಬಗ್ಗೆ ತಿಳಿದಿರುವಂತೆ, ಇಂದು ನಾನು ಅದನ್ನು ನನ್ನ ಕಣ್ಣುಗಳಿಂದ ನೋಡಿದ್ದೇನೆ ಮತ್ತು ನಾನು ಅಹ್ಮದಿಯತ್ನಲ್ಲಿ ಸೇರುತ್ತೇನೆ.

ಅಹ್ಮದಿಯರಿಗೆ ಪಾಕಿಸ್ತಾನದಲ್ಲಿ ಕೊನೆಯ ಶರೀಅತ್ ಗ್ರಂಥವಾದ ಪವಿತ್ರ ಖುರ್‌ಆನನ್ನು ಪಾರಾಯಣ ಮಾಡುವುದನ್ನು, ಆಲಿಸುವುದನ್ನು, ಇರಿಸುವುದನ್ನು ಕೂಡ ನಿಷೇಧಿಸಲಾಗಿದೆ ಮತ್ತು ಅದು ಬಹಳ ದೊಡ್ಡ ಅಪರಾಧವಾಗಿದೆ. ಅದೇ ಗ್ರಂಥದ ಮೂಲಕ ಅಹ್ಮದಿಯಾ ಜಮಾಅತ್ ಲೋಕದಲ್ಲಿ ಇಸ್ಲಾಮಿನ ಸಂದೇಶವನ್ನು ತಲುಪಿಸುತ್ತಿದೆ ಮತ್ತು ಲೋಕದ ಸುಧಾರಣೆ ಮಾಡುತ್ತಿದೆ.

ಮೈಕ್ರೋನೇಶಿಯದ ಮುಬಲ್ಲಿಗ್ ಆದ ಶರ್‌ಜೀಲ್ ಸಾಹಿಬ್ ಹೇಳುತ್ತಾರೆ: ಕೆಲವು ಕಾಲಕ್ಕೆ ಮುಂಚೆ ಸೈಮನ್ ಗೇಡನ್ ಎಂಬ ಹೆಸರಿನ ಒಬ್ಬ ವ್ಯಕ್ತಿ ಜಮಾಅತನ್ನು ಸಂಪರ್ಕಿಸಿ ಪವಿತ್ರ ಖುರ್‌ಆನ್ ಪ್ರತಿಯನ್ನು ಪಡೆದುಕೊಂಡರು. ಸ್ವಲ್ಪ ಕಾಲ ಕಳೆದ ನಂತರ ಒಂದು ದಿನ ಅಚಾನಕ್ಕಾಗಿ ಅವರ ಮೇಸಜ್ ಬಂತು ಮತ್ತು ಭೇಟಿಯಾಗಲು ಬಯಸುತ್ತೇನೆ ಎಂದು ಹೇಳಿದರು. ಮಸೀದಿಗೆ ಬಂದಾಗ ಅವರು ಹೀಗೆ ಹೇಳಿದರು: ನಾನು ಜೀವನ ಪೂರ್ತಿ ಬೈಬಲನ್ನು ಬಹಳ ವಿಶದವಾಗಿ ಓದಿದ್ದೇನೆ. ಆದರೆ ಪರಿಶ್ರಮಪಟ್ಟು ಕೂಡ ಅದರ ಅಧ್ಯಾಪನೆ ಹೃದಯಕ್ಕೆ ಇಳಿಯುವುದಿಲ್ಲ. ಏನೂ ಗೊತ್ತಾಗುವುದಿಲ್ಲ. ಆದರೆ ಪವಿತ್ರ ಖುರ್‌ಆನನ್ನು ಓದಲು ಶುರುಮಾಡಿದಾಗ ಅದರ ಪ್ರತಿಯೊಂದು ಪದ ಹೃದಯದಲ್ಲಿ ನೇರವಾಗಿ ಪ್ರವೇಶಿಸುವಂತೆ ಅನುಭವವಾಗುತ್ತಿತ್ತು. ಪೂರ್ತಿ ಜೀವಿತ ನಾನು ಹೇಗೆ ತಪ್ಪು ಹಾದಿಯಲ್ಲಿದ್ದೆ ಮತ್ತು ಪವಿತ್ರ ಖುರ್‌ಆನಿನಿಂದ ಹೇಗೆ ದೂರವಿದ್ದೆ ಎಂದು ಯೋಚಿಸಿ ಅವರು ಬಹಳ ಆಶ್ಚರ್ಯಗೊಂಡಿದ್ದರು. ಈಗ ಅವರು ಜಮಾಅತಿನಲ್ಲಿ ಪ್ರವೇಶಿಸಿದರು ಎಂದು ಮಾತ್ರವಲ್ಲ, ಬಹಳ ಧೈರ್ಯದಿಂದ ಇಸ್ಲಾಮಿನ ತಬ್ಲೀಗನ್ನು ಮಾಡುತ್ತಾರೆ.

ಪರಿಶುದ್ಧ ಆತ್ಮಗಳು ಅಹ್ಮದಿಯಾ ಜಮಾಅತ್ ಮೂಲಕ ಪ್ರಪಂಚದ ವಿವಿಧ ದೇಶಗಳಲ್ಲಿ ಇಸ್ಲಾಂ ಧರ್ಮವನ್ನು ಹೇಗೆ ಪ್ರವೇಶಿಸುತ್ತವೆ. ಸ್ಪೇನ್‌ನ ಅಮೀರ್ ಸಾಹಿಬ್ ಬರೆಯುತ್ತಾರೆ: ಸ್ಪಾನಿಷ್ ಸ್ನೇಹಿತ ಫ್ರಾನ್ಸಿಸ್ಕೊ ಖೀಸೋಸ್ ಬಹಳ ಕಾಲ ಸಂಶೋಧನೆ ಮಾಡಿದ ನಂತರ ಜನವರಿ 2023 ರಲ್ಲಿ ಮುಸ್ಲಿಂ ಆದರು. ಅವರು ಇಸ್ಲಾಂ ಧರ್ಮವನ್ನು ನಿಜವಾದ ಧರ್ಮವೆಂದು ಪರಿಗಣಿಸಿದರು, ಆದರೆ ಅವರು ಮುಸ್ಲಿಮರ ಚದುರಿದ ಸ್ಥಿತಿಯ ಬಗ್ಗೆ ಕಾಳಜಿ ವಹಿಸಿದರು ಮತ್ತು ಹಝ್ರತ್ ಅಲಿ(ರ) ರವರ ಆಳ್ವಿಕೆಯ ನಂತರ ಮುಸ್ಲಿಮರು ಒಂದಾಗಲು ಸಾಧ್ಯವಿಲ್ಲ ಎಂದು ಅವರು ಅರ್ಥಮಾಡಿಕೊಂಡರು. ಅವರು ಇಸ್ಲಾಮಿನ ಇತಿಹಾಸದ ಬಗ್ಗೆ ಅಧ್ಯಾಯನ ಮಾಡಿದ್ದರು. ಈಗ ಅವರು ಮತ್ತೆ ಒಂದಾಗಲು ನಿಝಾಮೆ ಖಿಲಾಫತ್‌ನಲ್ಲಿ ಮಾತ್ರ ಸಾಧ್ಯ. ಆದರೆ ನಿಝಾಮೆ ಖಿಲಾಫತ್ ಅನ್ನು ಎಲ್ಲಿ ಕಂಡುಹಿಡಿಯಬೇಕು? ಮಾರ್ಚ್ 2023 ರಲ್ಲಿ, ಅವರು ನಮ್ಮ ಅಹ್ಮದೀಯರಲ್ಲಿ ಒಬ್ಬರಾದ ತಾರಿಕ್ ಸಾಹಿಬ್ ಅವರ ಸಂಪರ್ಕಕ್ಕೆ ಬಂದರು. ಅವರು ಅಹ್ಮದಿಯಾವನ್ನು ಸಂಶೋಧನೆ ಮಾಡಲು ಸಲಹೆ ನೀಡಿದರು. ಆದ್ದರಿಂದ, ಅವರು ಅಹ್ಮದೀಯತ್ ಬಗ್ಗೆ ಮೂರು ತಿಂಗಳ ಕಾಲ ಸಂಶೋಧನೆ ನಡೆಸಿದರು ಮತ್ತು ಅವರ ಮನಸ್ಸಿಗೆ ತೃಪ್ತಿಯಾದಾಗ ಅವರು ಬೈಅತ್ ಮಾಡಿದರು ಮತ್ತು ಶುಕ್ರವಾರ ಇತ್ಯಾದಿಗಳಲ್ಲಿ ನಿಯಮಿತವಾಗಿ ಭೇಟಿ ನೀಡುತ್ತಾರೆ.

ತಜಾಕಿಸ್ತಾನದ ಸ್ನೇಹಿತ ಶ್ರೀ ಖುರುಮೋಫ್ ತುರ್ಗುನ್ ಸಾಹಿಬ್. ಪ್ರಸ್ತುತ ಕಿರ್ಗಿಸ್ತಾನ್‌ನಲ್ಲಿ ವಾಸಿಸುತ್ತಿದ್ದಾರೆ. ಅವರು ಹೇಳುತ್ತಾರೆ: ನಾನು ಇಲ್ಲಿ ಕಾಶ್ಗರ್‌ನಲ್ಲಿ ಕೆಲಸ ಮಾಡುತ್ತೇನೆ. ನಾನು ಕೆಲಸ ಮಾಡುವಲ್ಲಿ ಅಹ್ಮದಿ ಗೆಳೆಯರೂ ಇದ್ದರು. ಅವರು ಕೆಲವು ಹೆಸರುಗಳನ್ನು ತೆಗೆದುಕೊಂಡರು. ನಾನು ಸುಮಾರು ಮೂರು ವರ್ಷಗಳ ಕಾಲ ಜಮಾಅತ್‌ನ ಬಗ್ಗೆ ಮಾತನಾಡಿದೆ. ಅವರೊಂದಿಗೆ ಮಾತನಾಡಿದ ನಂತರ, ಅಹ್ಮದಿಯಾ ಜಮಾಅತ್ ನಿಜವಾದ ಇಸ್ಲಾಂ ಮತ್ತು ಇಮಾಮ್ ಮಹದಿ(ಅ) ಮಸೀಹ್ ಮೌಊದ್ ಆಗಿದ್ದಾರೆ ಮತ್ತು ಈಸ ಮಸೀಹರು ನಿಧನರಾಗಿದ್ದಾರೆ ಎಂದು ನನಗೆ ಮನವರಿಕೆಯಾಯಿತು. ಆದ್ದರಿಂದ ವಿನೀತನು ಬೈಅತ್ ಮಾಡುವ ಮೂಲಕ ಅಹ್ಮದಿಯಾ ಜಮಾಅತ್‌ಗೆ ಸೇರಿಕೊಂಡೆನು. ನಂತರ ಅವರು ದುವಾಕ್ಕಾಗಿ ಹೇಳಿದರು, ಸರ್ವಶಕ್ತನಾದ ಅಲ್ಲಾಹನು ನನಗೆ ಸೇವೆ ಮಾಡಲು ಮತ್ತು ಧರ್ಮನಿಷ್ಠರನ್ನಾಗಿ ಮಾಡಲು ಮತ್ತು ಬೈಅತ್‌ನ ಹತ್ತು ಷರತ್ತುಗಳನ್ನು ಪೂರೈಸುವ ಅವಕಾಶವನ್ನು ನೀಡಲಿ ಎಂದು ಪ್ರಾರ್ಥಿಸಿ ಡಂದು ಕೇಳಿಕೊಂಡರು.

ರಶಿಯಾದ ಮುಬಲ್ಲಿಗ್ ಆದ ಅತಾಉಲ್ ವಾಹಿದ್ ಬರೆಯುತ್ತಾರೆ: ಒಬ್ಬ ಯುವಕನು ಅಲ್ಲಾಹನ ಅನುಗ್ರಹದಿಂದ ಇಸ್ಲಾಂ ಅಹ್ಮದಿಯತ್ ಕಡೆಗೆ ಆಕರ್ಷಿತನಾದನು. ಒಂದೂವರೆ ವರ್ಷದ ಹಿಂದೆ ಅವರನ್ನು ಸಂಪರ್ಕಿಸಲಾಗಿತ್ತು. ಅವನು ಚಿಕ್ಕ ಪಟ್ಟಣದ ಯುವಕನಾಗಿದ್ದನು ಮತ್ತು ಅವನ ತಂದೆ ಧರ್ಮದ ಬಗ್ಗೆ ಅಜಾಗೃತರಾಗಿದ್ದರು. ಆದರೆ ಮಾರ್ಸೆಲ್ ಅವರ ಪತ್ನಿ ಕ್ರಿಶ್ಚಿಯನ್ ಆರ್ಥೊಡಾಕ್ಸ್ ಚರ್ಚ್‌ಗೆ ಸೇರಿದವರಾಗಿದ್ದರು. ಹೀಗೆ ಈ ಮಾರ್ಸೆಲ್ ಯೌವನಾವಸ್ಥೆಯಲ್ಲಿದ್ದರು ಮತ್ತು ಅವರ ಅಣ್ಣ ಕ್ರಿಶ್ಚಿಯನ್ ಆಗಿದ್ದರು, ಆದರೆ ಅವರ ತಂದೆಯ ಖೌಮಿನಿಂದಾಗಿ ಅವರು ಇಸ್ಲಾಂ ಧರ್ಮಕ್ಕೆ ಆಕರ್ಷಿತರಾದರು ಮತ್ತು ಅವರ ತಂದೆ ಈಗಾಗಲೇ ಮುಸ್ಲಿಂ ಆಗಿದ್ದರು. ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದು ತಂದೆಯ ಗಮನದಿಂದ ಇಸ್ಲಾಂ ಸ್ವೀಕರಿಸಿದರು, ಆದರೆ ಮುಸ್ಲಿಮರ ಮಾತು ಕೇಳಿ ಇಸ್ಲಾಂ ಸ್ವೀಕರಿಸಿದರು, ಆದರೆ ಇಸ್ಲಾಂ ಸ್ವೀಕರಿಸಿದ ನಂತರವೂ ಬೋಧನೆಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳು ತಮ್ಮ ಮನಸ್ಸಿನಲ್ಲಿ ಬಂದವು ಎಂದು ಅವರು ಹೇಳುತ್ತಾರೆ, ಸ್ಥಳೀಯ ಮೌಲ್ವಿಗಳು ತೃಪ್ತಿಕರವಾಗಿ ಉತ್ತರ ನೀಡಲಿಲ್ಲ. ಈ ಆತಂಕವು ಹೆಚ್ಚುತ್ತಲೇ ಇತ್ತು ಮತ್ತು ಈ ಮಧ್ಯೆ ಸರ್ವಶಕ್ತನಾದ

ಅಲ್ಲಾಹನು ಅವರನ್ನು ಜಮಾಅತ್ ಅಹ್ಮದಿಯಾ ರಶಿಯಾದೊಂದಿಗೆ ಇಂಟರ್ನೆಟ್ ಮೂಲಕ ಸಂಪರ್ಕಿಸಿದರು. ಇಲ್ಲಿಂದ ಮಾರ್ಸೆಲ್ ಅವರ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರಗಳನ್ನು ಪಡೆಯುತ್ತಿದ್ದರು. ಮುಂದೆ ಅವರು ಹೇಳುತ್ತಾರೆ: ನಾನು ಅನೇಕ ಕಡೆ ಇಸ್ಲಾಂ ಧರ್ಮವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ ಆದರೆ ನಾನು ಅಹ್ಮದಿಯಾದಲ್ಲಿ ನಿಜವಾದ ಇಸ್ಲಾಂ ಅನ್ನು ಕಂಡುಕೊಂಡಿದ್ದೇನೆ. ಹೀಗೆ ಅವರು ಬೈಅತ್ ಮಾಡಿದರು.

ಫಿಲಿಪೈನ್ಸ್‌ನ ಮುಬಲ್ಲಿಗ್ ಇಂಚಾರ್ಜ್ ಹೇಳುತ್ತಾರೆ: ಇಲ್ಲಿ ಒಂದು ದ್ವೀಪದಲ್ಲಿ 139 ಬೈಅತ್‌ಗಳಾದವು ಮತ್ತು ಬೈಅತ್ ಮಾಡಿದವರಲ್ಲಿ ಒಬ್ಬ ಶಾಲಾ ಪ್ರಾಂಶುಪಾಲರು ಮತ್ತು ಇಬ್ಬರು ಇಮಾಮ್‌ಗಳು ಮತ್ತು ನಾಲ್ಕು ಮಸೀದಿಯ ಇಮಾಮ್‌ಗಳು ಬೈಅತ್ ಮಾಡಿದ್ದಾರೆ ಮತ್ತು ಅಹ್ಮದಿ ಆಗಿದ್ದಾರೆ. ಮಸೀದಿಯ ಇಮಾಮ್, ಹಾಜಿ ಈಸಾ ಅವರು ಇಮಾಮ್ ಆಗಿರುವ ಮಸೀದಿ ಈಗ ಅಹ್ಮದಿಯಾ ಜಮಾಅತ್‌ನ ಮಸೀದಿಯಾಗಿದೆ ಎಂದು ಹೇಳುತ್ತಾರೆ. ಸ್ನೇಹಿತರೊಬ್ಬರು ಈ ಮಸೀದಿಯ ಪಕ್ಕದಲ್ಲಿರುವ ಸ್ವಲ್ಪ ಜಾಗವನ್ನು ಜಮಾಅತ್ತಿಗೆ ದಾನ ಮಾಡಿದ್ದಾರೆ, ಅದರಲ್ಲಿ ಶಾಶ್ವತ ಮುಅಲ್ಲಿಮ್‌ರನ್ನು ನೇಮಿಸಲು ವರ್ಷದಲ್ಲಿ ಮಿಷನ್ ಹೌಸ್ ಅನ್ನು ನಿರ್ಮಿಸಲು ಯೋಜಿಸಲಾಗಿದೆ. ಈ ಇಮಾಮ್‌ಗಳು ಆರ್ಥಿಕ ತ್ಯಾಗ ಮಾಡುವವರಾಗಿದ್ದಾರೆ. ಅವರು ಹಣ ಪಡೆಯುತ್ತಾರೆ ಎಂದಲ್ಲ. ಅವರ ಒಂದು ಅಂಗಡಿ ಇದೆ, ವ್ಯಾಪಾರವಿದೆ, ಆರ್ಥಿಕ ತ್ಯಾಗ ಮಾಡುವವರಾಗಿದ್ದಾರೆ ಮತ್ತು ಒಂದು ದಿನ ಅವರು ಹೇಳಿದರು ನಾನು ಒಂದೇ ದಿನದಲ್ಲಿ ಮಾಡಿದ ಐದು ನೂರು ಪೆಸೆಗಳ ಆರ್ಥಿಕ ತ್ಯಾಗ, ನನ್ನ ನಂಬಿಕೆಯನ್ನು ಬಲಪಡಿಸಲು ಮರುದಿನ ಸರ್ವಶಕ್ತನಾದ ಅಲ್ಲಾಹನು ನನಗೆ ಅನಿರೀಕ್ಷಿತವಾಗಿ ಒಂದು ಲಕ್ಷ ಪೈಸೆಗಳನ್ನು ಆಮದ್ದಾಗಿ ನೀಡಿದನು. ಸರ್ವಶಕ್ತನಾದ ಅಲ್ಲಾಹನು ಈ ರೀತಿ ಪರಿಶುದ್ಧ ಆತ್ಮಗಳನ್ನು ಮಾರ್ಗದರ್ಶನ ನೀಡುತ್ತಾನೆ.

ಮಾಲಿ ರೀಜನ್‌ನ ಸಿಕಾಸೌನ ಮುಬಲ್ಲಿಗ್ ಸಾಃಇಬ್ ಬರೆಯುತ್ತಾರೆ: ಮರ್ವಾನ್ ಕೋಲಿ ಬಾಲಿ ಸಾಹಿಬ್ ಅವರು ಅಹ್ಮದಿಯಾ ಮಿಷನ್ ಹೌಸ್‌ಗೆ ಬಂದು ಬೈಅತ್ ಮಾಡಲು ಬಯಸಿದ್ದರು. ರೇಡಿಯೋ ಅಹ್ಮದಿಯಾವನ್ನು ಆಸಕ್ತಿಯಿಂದ ಕೇಳುತ್ತಿದ್ದು, ಜಮಾಅತ್‌ನ ಬಹುತೇಕ ಮಾತುಕತೆಗಳಿಂದ ತೃಪ್ತನಾಗಿದ್ದೇನೆ, ಆದರೆ ಬೈಅತ್ ಮಾಡಲು ನನ್ನ ಮನಸ್ಸು ಒಪ್ಪುತ್ತಿರಲಿಲ್ಲ. ಅವರು ಹೇಳಿದರು: ನಿನ್ನೆ, ನಾನು ರೇಡಿಯೊವನ್ನು ಕೇಳುತ್ತಿದ್ದಾಗ, ನನ್ನ ಕಣ್ಣುಗಳು ಸೆಳೆಯಲ್ಪಟ್ಟವು, ಆದ್ದರಿಂದ ನಾನು ಕನಸಿನಲ್ಲಿ ನೋಡಿದೆ, ಆಗಸದಲ್ಲಿ ಚಂದ್ರನು ತುಂಬಾ ಪ್ರಕಾಶಮಾನವಾಗಿರುತ್ತಾನೆ ಮತ್ತು ಚಂದ್ರನಲ್ಲಿ ಇಬ್ಬರ ಚಿತ್ರಗಳು ಗೋಚರಿಸುತ್ತವೆ. ಒಂದು ಚಿತ್ರ ದೊಡ್ಡದಾಗಿದೆ ಮತ್ತು ಒಂದು ಚಿಕ್ಕದಾಗಿದೆ ಮತ್ತು ಪಕ್ಕದಲ್ಲಿ ನಿಂತಿರುವ ಮಕ್ಕಳು ಇದು ಇಮಾಮ್ ಮಹದಿ(ಅ) ಮತ್ತು ಅವರ ಖಲೀಫ ಅವರ ಚಿತ್ರ ಎಂದು ಕೂಗುತ್ತಿದ್ದಾರೆ. ಅವರು ಆಗಮಿಸಿದ್ದಾರೆ. ಮರ್ವಾನ್ ಸಾಹಿಬ್ ಅವರು ನಂತರ ಅವರು ತಮ್ಮ ಕನಸಿನಲ್ಲಿ ಹತ್ತಿರದಲ್ಲಿ ನಿಂತಿದ್ದ ಓರ್ವ ಹಿರಿಯ ವ್ಯಕ್ತಿಯನ್ನು ನೀವು ಚಿತ್ರವನ್ನು ನೋಡುತ್ತಿದ್ದೀರಾ? ಎಂದು ಕೇಳಿದರು, ಅದಕ್ಕೆ ಆ ಹಿರಿಯವ್ಯಕ್ತಿಯ ನಿರಾಕರಿಸಿದರು ಆದರೆ ನನ್ನ ಮನಸ್ಸು ಇಮಾಮ್ ಮಹದಿಯ ಬಗ್ಗೆ ಪ್ಕಟಿಸುತ್ತಿದ್ದ ಅಹ್ಮದಿಯ್ಯತ್ ನಿಜವಾದ ಜಮಾಅತ್ ಆಗಿದೆ ಎಂದು ತೃಪ್ತಿಯಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಖಲೀಫರ ಚಿತ್ರವನ್ನು ನೋಡಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ದೊಡ್ಡ ಚಿತ್ರವನ್ನು ಗುರುತಿಸಿದರು. ಅದರೊಂದಿಗೆ ನನ್ನ ಚಿತ್ರವೂ ಇತ್ತು ಮತ್ತು ಇದು ನನ್ನ ಕನಸಿನಲ್ಲಿ ಕಂಡಿತು ಎಂದು ಅವರು ಹೇಳಿದರು.

ಸ್ಪೇನ್‌ನ ಅಮೀರ್ ಸಾಃಇಬ್ ಬರೆಯುತ್ತಾರೆ ಕಾರ್ಲೋಸ್ ಸಾಹಿಬ್ ಅವರು ಈ ವರ್ಷ ಬೈಅತ್ ಮಾಡಿದ್ದಾರೆ. ಅವರು ಮೊದಲು ಮುಸ್ಲಿಂ ಆಗಿದ್ದರು. ಅವರಿಗೆ ಅಬ್ದುಲ್ ಸಲಾಂ ಎಂದು ಹೆಸರಿಸಲಾಯಿತು. ಅವರು ತಮ್ಮ ಕನಸಿನಲ್ಲಿ ಬನ್ನಿ! ಶಾಂತಿಯ ಕಡೆಗೆ ಬನ್ನಿ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಕರೆಯುತ್ತಿದ್ದರು ಎಂದು ಕಂಡರು. ಕನಸಿನ ನಂತರ ಒಂದು ದಿನ, ಅವರ ಪತ್ನಿ ಅವರಿಗೆ ಇಂಟರ್ನೆಟ್ನಲ್ಲಿ ಏನನ್ನೋ ತೋರಿಸುತ್ತಿದ್ದರು, ಮತ್ತು ಅವನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಚಿತ್ರವನ್ನು ನೋಡಿದಾಗ, "ಇವರು ನನ್ನನ್ನು ಕನಸಿನಲ್ಲಿ ಶಾಂತಿಯ ಕಡೆಗೆ ಕರೆಯುತ್ತಿದ್ದರು" ಎಂದು ಹೇಳಿದರು. ತದನಂತರೆ ಅವರು ಅಹ್ಮದಿಯತ್‌ನ ಬಗ್ಗೆ ಸಂಶೋಧನೆ ಆರಂಭಿಸಿದರು ಮತ್ತು ಕೆಲವು ದಿನಗಳ ನಂತರ ಅವರು ಮತ್ತೆ ಕನಸು ಕಂಡರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನಾನು ಇಮಾಮ್ ಮಹದಿ ಮತ್ತು ಮೆಸ್ಸಿಹ್ ಎಂದು ಅವರಿಗೆ ಹೇಳಿದರು. ಈ ಕನಸಿನ ನಂತರ ಅವರ ಹೃದಯುವು ಅಹ್ಮದಿಯಾದ ಕಡೆಗೆ ಮನವರಿಕೆಯಾಯಿತು, ಆದರೆ ಅವರು ಬೈಅತ್ ಮಾಡಲಿಲ್ಲ ಮತ್ತು ತಮ್ಮ ಸಂಶೋಧನೆಯನ್ನು ಮುಂದುವರೆಸಿದರು. ಅವರ ಮುಖವು ಅಸಮಾಧಾನದ ಲಕ್ಷಣಗಳನ್ನು ತೋರಿಸಿದಾಗ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಮೂರನೇ ಬಾರಿ ನೋಡಿದರು. ಹಝ್ರತ್ ಮಸೀಹ್ ಮೌಊದ್(ಅ) ಅವರ ಮುಖದ ಮೇಲೆ ಅಸಮಾಧಾನದ ಭಾವನೆಗಳನ್ನು ಆಲಿಸಿದ ತಕ್ಷಣವೇ ಅವರು ಜಮಾಅತ್ ಅನ್ನು ಸಂಪರ್ಕಿಸಿ ಬೈಅತ್ ಮಾಡಿದರು.

ವಿರೋಧಿಗಳ ಅತ್ಯುತ್ತಮ ಪ್ರಯತ್ನಗಳ ಹೊರತಾಗಿಯೂ, ನಮ ಅಹ್ಮದೀಯರು ದೃಢವಾದ ವಿಶ್ವಾಸನ್ನು ಹೇಗೆ ತೋರಿಸುತ್ತಾರೆ?

ಬುರ್ಕಿನಾಫಾಸೋ ಮಹ್‌ದಿಯಾಬಾದಿನ ನಾಸಿರ್ ಸಈದ್ ವಜೀಕ ಸಾಹಿಬ್ ಹೇಳುತ್ತಾರೆ: ನಮ್ಮ ಗ್ರಾಮದ ಬಹುತೇಕರು ಅಹ್ಮದಿಯ್ಯತ್ ಸ್ವೀಕಾರ ಮಾಡಿದಾಗ ನಮ್ಮ ಒಬ್ಬ ಸ್ನೇಹಿತ ನಮ್ಮನ್ನು ಸೌದಿ ಅರೇಬಿಯಕ್ಕೆ ಕರೆದರು ಮತ್ತು ಕಅ್‌ಬ ಭವನವನ್ನು ತೋರಿಸುತ್ತಾ, ವಹಾಬಿಯಾಗಲು ಮತ್ತು ಅಹ್ಮದಿಯ್ಯತ್ ಉಪೇಕ್ಷಿಸಲು ಹೇಳಿದನು. ನಾನು ಹೇಳಿದೆ: ಅಹ್ಮದಿಯ್ಯತ್ ಬಿಡಬೇಕಾದಂತಹ ಸ್ಥಿತಿ ನನ್ನ ಜೀವಿತದಲ್ಲಿ ಬರದಿರಲಿಕ್ಕಾಗಿ ಮತ್ತು ಅಂತಹ ಸ್ಥಿತಿ ಬರುವುದಕ್ಕೆ ಮುಂಚಿತವಾಗಿ ಸತ್ಯವಿಶ್ವಾಸದ ಸ್ಥಿತಿಯಲ್ಲಿ ನನಗೆ ಮೃತ್ಯು ನೀಡಲು ನಾನು ಈ ಪರಿಶುದ್ಧ ಸ್ಥಳದ ನೆರಳಿನಲ್ಲಿ ನಿಂತುಕೊಂಡು ದುಆ ಮಾಡುತ್ತೇನೆ. ಅವರ ಸ್ನೇಹಿತ ಅವರನ್ನು ಭೇಟಿಯಾಗಲು ಬುರ್ಕಿನಾಫಾಸೋಗೆ ಮರಳಿ ಬಂದಾಗ ಅಲ್‌ಹಾಜ್ ಇಬ್ರಾಹೀಂ ಸಾಹಿಬ್‌ರು ಅವರನ್ನು ತಬ್ಲೀಗ್ ಮಾಡಿದರು ಮತ್ತು ಅವರು ಅಹ್ಮದಿಯಾದರು.

ನಂತರ, ವಿರೋಧದಲ್ಲಿ ನಿರಂತರತೆಯ ಬಗ್ಗೆ, ಬುರ್ಕಿನಾ ಫಾಸೊದ ಅಮೀರ್ ಸಾಹಿಬ್ ಬರೆಯುತ್ತಾರೆ: ಡೋರಿ ಪ್ರದೇಶದ ಮುಅಲ್ಲಿಮ್ ಉಮರ್ ಡಿಕೊ ಸಾಹಿಬ್ ಇದ್ದಾರೆ. ಒಂದು ದಿನ ವಹಾಬಿ ಮುಲ್ಲಾಗಳ ಗುಂಪೊಂದು ಅವರ ಮನೆಗೆ ಬಂದು ಅಹ್ಮದಿಯಾವನ್ನು ತ್ಯಜಿಸುವಂತೆ ಹೇಳಿದರು ಮತ್ತು ಇಲ್ಲದಿದ್ದರೆ ನಿಮ್ಮನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದರು. ಉಮರ್ ಡೀಕೊ ಸಾಹಿಬ್ ಹೇಳಿದರು, "ಖಂಡಿತವಾಗಿ ನನ್ನನ್ನು ಕೊಲ್ಲು, ಆದರೆ ಅಹ್ಮದಿಯತ್ ಅನ್ನು ಬಿಡುವ ಪ್ರಶ್ನೆಯೇ ಇಲ್ಲ ಮತ್ತು ನಾನು ತಬ್ಲೀಗ್ ಮಾಡುವುದನ್ನು ನಿಲ್ಲಿಸುವುದಿಲ್ಲ." ನಾನೂ ತಬ್ಲೀಗ್ (ಉಪದೇಶ) ಮಾಡುತ್ತೇನೆ. ಇದರಿಂದ ಅವರು ತುಂಬಾ ಕೋಪಗೊಂಡರು. ಮರುದಿನ ಕೆಲವು ಶಸ್ತ್ರಧಾರಿಗಳು ಅವರ ಮನೆಗೆ ಬಂದರು. ಇದನ್ನು ಕಂಡು ಅಹ್ಮದಿ ಸ್ನೇಹಿತರು ನೀವು ಡೋರಿಗೆ ಹೋಗುವಂತೆ ಸಲಹೆ ನೀಡಿದರು. ಆ ರಾತ್ರಿ ಮುಅಲಿಮ್ ಸಾಹಿಬ್ ತಮ್ಮ ಕುಟುಂಬದೊಂದಿಗೆ ನಮಾಝಿನಲ್ಲಿ ತೊಡಗಿದ್ದರು ಮತ್ತು ಸರ್ವಶಕ್ತನಾದ ಅಲ್ಲಾಹನು ಅವರ ಮಾರ್ಗದರ್ಶನವನ್ನು ಕೋರಿದರು. ಮುಅಲ್ಲಿಮ್ ಸಾಹೇಬರು ತಮ್ಮ ಕನಸಿನಲ್ಲಿ ಇಸ್ಮಾಯಿಲ್ ಎಂಬ ವ್ಯಕ್ತಿಯನ್ನು ನೋಡಿದರು. ಅವರು ಹೇಳಿದರು, ಓ ಉಮರ್! ಹಾಗಾದರೆ ನೀವು ಎಲ್ಲಿಗೆ ಹೋಗುತ್ತೀಯ? ಡೋರಿ ಎಂದು ಉತ್ತರಿಸಿದರು. ಇದಕ್ಕೆ ಅವರು ಸರಿ ಎಂದರು. ಹೀಗೆ, ಈ ಕನಸಿನ ನಂತರ, ಮರುದಿನ ಬೆಳಿಗ್ಗೆ ಅವರು ವಲಸೆ ಹೋದರು ಮತ್ತು ರಿಕ್ಷಾ ಚಾಲಕನು ಅವರನ್ನು ಸುರಕ್ಷಿತವಾಗಿ ಅಲ್ಲಿಗೆ ಕರೆದೊಯ್ದನು ಮತ್ತು ಡೋರಿಯನ್ನು ತಲುಪಿದಾಗ ಅವರ ಪತ್ನಿಗೆ ಶಸ್ತ್ರಸಜ್ಜಿತ ಭಯೋತ್ಪಾದಕರು ಬಂದಿದ್ದಾರೆ ಮತ್ತು ನಿಮ್ಮನ್ನು ಹುಡುಕುತ್ತಿದ್ದಾರೆ ಎಂದು ಕರೆ ಬಂತು ಎಂದು ಹೇಳುತ್ತಾರೆ. ಈ ರೀತಿಯಲ್ಲಿ ಅಲ್ಲಾಹನು ಅವರ ಜೀವ ಉಳಿಸಿದನು.

ನೈಜೀರಿಯದ ಒಸನ್ ರಾಜ್ಯದ ಹಳ್ಳಿಯೊಂದರ ನಿವಸಿ ಬದರ್ ಅಡರೇಮಿ ಸಾಹಿಬ್ ಅಹ್ಮದಿಯ್ಯತ್ ಸ್ವೀಕಾರ ಮಾಡಲು ಸೌಭಾಗ್ಯ ಲಭಿಸಿತು. ಅದಕ್ಕಿಂತ ಮೊದಲು ಅವರು ವಿರೋಧಿ ಗುಂಪಿನ ಕ್ರಿಯಾಶೀಲ ಸದಸ್ಯರಾಗಿದ್ದರು. ಅಹ್ಮದಿಯ್ಯತ್ ಸ್ವೀಕಾರ ಮಾಡಿದ ನಂತರ ಕಠಿಣವಾದ ವಿರೋಧವನ್ನು ಅವರಿಗೆ ಎದುರಿಸಬೇಕಾಗಿ ಬಂತು. ಒಂದು ದಿನ ಅವರು ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ತೀವ್ರವಾದ ಬಿರುಗಾಳಿ ಬೀಸಿತು. “ಒಂದು ದಿನ ನೀನು ಕೆಲಸದಿಂದ ಮರಳಿ ಬರುವಾಗ ನಿನ್ನ ಮನೆ ಸರ್ವನಾಶವಾಗಿ ಇರುವುದನ್ನು ನೀನು ನೋಡುವೆ” ಎಂದು ವಿರೋಧಿಗಳು ಹೇಳಿದ್ದು ಅವರ ನೆನಪಿಗೆ ಬಂತು. ಅವರು ಹೀಗೆ ದುಆ ಮಾಡಿದರು: ಇದು ನಿನ್ನ ಜಮಾಅತ್ ಆಗಿದ್ದರೆ ಮತ್ತು ಹಝ್ರತ್ ಪೈಗಂಬರ್(ಸ) ಸುವಾರ್ತೆ ನೀಡಿದ್ದ ವಾಗ್ದತ್ತ ಮಹ್‌ದಿ ಹಝ್ರತ್ ಮಸೀಹ್ ಮೌಊದ್(ಅ) ಆಗಿರುವರು ಎಂದಾದರೆ, ನನ್ನ ಮನೆ ಬಿದ್ದು ಹೋಗುವಂತೆ ನೀನು ಮಾಡಬೇಡ. ಮರಳಿ ಬಂದಾಗ ಮನೆಯ ಪ್ರತಿಯೊಂದು ಕೊಠಡಿಗಳು ಸುರಕ್ಷಿತವಾಗಿ ಇರುವುದನ್ನು ಅವರು ಕಂಡರು. ಯಾವುದೇ ವಿಧದ ನಷ್ಟಗಳು ಆಗಿರಲಿಲ್ಲ. ಆದರೆ ಸುತ್ತಮುತ್ತಲಿನ ಎಲ್ಲ ಮನೆಗಳು ನಾಶವಾಗಿದ್ದುವು. ಇದು ದೈವಿಕ ಜಮಾಅತ್ ಎಂದು ಅವರಿಗೆ

ದೃಢವಿಶ್ವಾಸವಾಯಿತು. ಲೋಕದ ಅನೇಕ ಸ್ಥಳಗಳಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಅಲ್ಲಾಹನ ಸಹಾಯಗಳ ಘಟನೆಗಳು ಕಂಡುಬರುತ್ತವೆ. ಅವರು ನಮಗೆ ನೈಜ ಇಸ್ಲಾಮಿನ ಪಾಠವನ್ನು ಕಲಿಸಿಕೊಟ್ಟರು. ಈ ಘಟನೆಗಳು ಅಹ್ಮದಿಯ್ಯತ್ತಿನ ಸತ್ಯತೆಯ ಪುರಾವೆಗಳಾಗಿವೆ. ಅವುಗಳು ಜನರ ವಿಶ್ವಾಸಗಳನ್ನು ಸುದೃಢಗೊಳಿಸುತ್ತಿವೆ. ಅಲ್ಲಾಹನು ಲೋಕದ ಕಣ್ಣುಗಳನ್ನು ತೆರೆಸಲಿ. ನಂಬಿಕೆ ಮತ್ತು ದೃಢವಿಶ್ವಾಸವನ್ನು ಸ್ವೀಕಾರ ಮಾಡಲು ಸೌಭಾಗ್ಯ ನೀಡಲಿ.

ಈ ಸಮಯದಲ್ಲಿ ನಾನು ಕೆಲವು ದಿವಂಗತರನ್ನು ಉಲ್ಲೇಖಿಸಬೇಕಾಗಿದೆ, ಕೆಲವು ಜನಾಝಗಳಿವೆ. ಅವರ ಬಗ್ಗೆ ಪ್ರಸ್ತಾಪಿಸುವೆನು ಅದಕ್ಕು ಮುಂಚೆ ಒಂದು ವಿಷಯ ಹೇಲಲು ಬಯಸುತ್ತೇನೆ ಅದೇನೆಂದರೆ ಈ ದಿನಗಳಲ್ಲಿ ಕೊವಿಡ್ ಸಾಂಕ್ರಮಿಕ ರೋಗವು ಮತ್ತೆ ಆವರಿಸುತ್ತಿದೆ ಆದ್ದರಿಂದ ಈ ಬಗ್ಗೆ ಜನರು ಜಾಗೃತರಾಗಿರಬೇಕು.

ದಿವಂಗತರಲ್ಲಿ ಮೊದಲನೇಯ ಪ್ರಸ್ತಾಪವು ಮಾನ್ಯ ಪೀರ್ ಝಿಯಾಉದ್ದೀನ್ ಸಾಹಿಬ್ ಅವರ ಪತ್ನಿ ಮಾನ್ಯ ಅಮತುಲ್ ಹಾದಿ ಸಾಹಿಬ ಅವರದ್ದಾಗಿದೆ. ಇವರು ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ) ಅವರ ಪುತ್ರಿಯಾಗಿದ್ದರು. 92ನೇ ವಯಸ್ಸಿನಲ್ಲಿ ಇತ್ತೀಚಿಗೆ ನಿಧನ ಹೊಂದಿದರು **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಪುತ್ರ ಪೀರ್ ಶಬ್ಬೀರ್ ಅಹ್ಮದ್ ಇಸ್ಲಾಮಾಬಾದ್‌ನ ನಾಯಿಬ್ ಅಮೀರ್ ಆಗಿದ್ದಾರೆ ಮತ್ತು ಬ್ರಿಗೇಡಿಯರ್ ದಬೀರ್ ಅಹ್ಮದ್ ಇಂದು ಫಜ್ಲೆ ಉಮರ್ ಆಸ್ಪತ್ರೆಯ ಆಡಳಿತಾಧಿಕಾರಿಯಾಗಿದ್ದಾರೆ. ಅವರ ನಿವೃತ್ತಿಯ ನಂತರ ಅವರು ವಖ್ಫ್ ಮಾಡಿದ್ದರು. ಇವರಿಗೆ ಇಬ್ಬರು ಹೆಣ್ಣು ಮಕ್ಕಳೂ ಇದ್ದಾರೆ.

ಅವರ ಪುತ್ರ ಬರೆಯುತ್ತಾರೆ: ನಾವು ಸಹೋದರ ಸಹೋದರಿಯರು ಯಾವಾಗಲೂ ನಮ್ಮ ತಾಯಿಯನ್ನು ಬಾಲ್ಯದಿಂದಲೂ ನಮಾಝ್ ಮತ್ತು ಪವಿತ್ರ ಖುರ್‌ಆನ್ ಪಠಣಗಳಲ್ಲಿ ನಿಯಮಿತವಾಗಿ ಕಾಣುತ್ತಿದ್ದೆವು ಮತ್ತು ನಿಯಮಿತವಾಗಿ ಚಂದಗಳನ್ನು ಪಾವತಿಸುವವರಾಗಿದ್ದರು. ಎಂಟಿಎ ನೋಡುವುದು ಅವರ ದಿನಚರಿಯಾಗಿತ್ತು. ಜಮಾಅತ್‌ನ ಯೋಜನೆಗಳಲ್ಲಿ ಭಾಗವಹಿಸುತ್ತಿದ್ದರು. ಅವರು ತೆಹ್ರೀಕ್–ಎ–ಜದೀದ್‌ನ ದಫ್ತರ್ ಅವ್ವಲ್‌ನ ಚಂದ ನೀಡುವವರಾಗಿದ್ದರು. 1971 ರ ಭಾರತ–ಪಾಕ್ ಯುದ್ಧದ ಸಮಯದಲ್ಲಿ, ಅಮತುಲ್ ಹಾದಿ ಸಾಹಿಬ ಅವರ ಪತಿ ಬ್ರಿಗೇಡಿಯರ್ ಜಿಯಾವುದ್ದೀನ್ ಸಾಹಿಬ್ ಅವರು ಪೂರ್ವ ಪಾಕಿಸ್ತಾನದಲ್ಲಿದ್ದರು, ಅದು ಈಗ ಬಾಂಗ್ಲಾದೇಶದಲ್ಲಿದೆ ಮತ್ತು ಅವರು ದೀರ್ಘಕಾಲ ಅಲ್ಲಿಯೇ ನೆಲೆಸಿದ್ದರು. ಪೀರ್ ದಬೀರಿಯಾ ಹೇಳುತ್ತಾರೆ ನನ್ನ ತಾಯಿ ಮತ್ತು ತಂಗಿಯೂ ಇದ್ದರು. ಸ್ವಲ್ಪ ಸಮಯದ ನಂತರ ತಂದೆಯವರು ತಾಯಿ ಮತ್ತು ತಂಗಿಯನ್ನು ಕಳುಹಿಸಿದರು. ಅವರು ಚಿಂತಾಕ್ರಾಂತಯಾಗಿರುತ್ತಿದ್ದರು, ಆದರೆ ಅವರು ಎಂದಿಗೂ ತಮ್ಮ ಚಿಂತೆಯನ್ನು ಮಕ್ಕಳೊಂದಿಗೆ ಹೇಳಲಿಲ್ಲ ಆದರೆ ನಮ್ಮನ್ನು ಪ್ರೋತ್ಸಾಹಿಸುತ್ತಲೇ ಇದ್ದರು ಮತ್ತು ಆರು ತಿಂಗಳ ನಂತರ ಬ್ರಿಗೇಡಿಯರ್ ಸಾಹಿಬ್ ಅಲ್ಲಿಂದ ಹಿಂತಿರುಗಿದರು. ಅವರು ಯಾವಾಗಲೂ ಈದ್‌ಗಳಲ್ಲಿ ಬಡವರನ್ನು ನೋಡಿಕೊಳ್ಳಲು ಮತ್ತು ಅವರಿಗೆ ಈದಿಗಳನ್ನು ನೀಡುವಂತೆ ಸಲಹೆ ನೀಡುತ್ತಿದ್ದರು. ಪ್ರತಿ ವರ್ಷ ಎರಡು ಬಾರಿ ಹ್ಯುಮಾನಿಟಿ ಫಸ್ಟ್‌ಗೆ ಒಂದು ದೊಡ್ಡ ಮೊತ್ತವನ್ನು ಕಳುಹಿಸುತ್ತಿದ್ದರು. ಬಾವಿ ಮತ್ತು ಹ್ಯಾಂಡ್ ಪಂಪ್‌ಗಳನ್ನು ಅಳವಡಿಸಲು, ಮಕ್ಕಳಿಗೆ ಶಿಕ್ಷಣ ನೀಡಲು, ಬಡವರಿಗೆ ಆಹಾರ ನೀಡಲು ಕಳುಹಿಸುತ್ತಿದ್ದರು. ಅದನ್ನು ಡಾ॥ ನೂರಿ ಸಾಹಿಬ್ ಕೂಡ ಉಲ್ಲೇಖಿಸಿದ್ದಾರೆ. ಅವರ ಮಗಳು ಅಮತುಲ್–ಕಬೀರ್ ತಲ್‌ಅತ್ ಹೇಳುತ್ತಾರೆ: ಅವರು ಉಚ್ಛ ಸ್ವರದಲ್ಲಿ ಪವಿತ್ರ ಖುರ್‌ಆನ್‌ನ ತಿಲಾವತ್ ಮಾಡುತ್ತಿದ್ದರು. ಅವರು ಯಾರ ಬಗ್ಗೆಯೂ ಹಿಂದೆ ದೋಷಿಸುತ್ತಿರಲಿಲ್ಲ. ಇತರರು ಹೀಗೆ ಮಾಡದಂತೆ ಅವರು ತಡೆಯುತ್ತಿದ್ದರು. ಖಿಲಾಫತ್‌ನೊಂದಿಗೆ ಬಹಳ ಉತ್ತಮ ಸಂಬಂಧ ಹೊಂದಿದ್ದರು. ನಿಯಮಿತವಾಗಿ ಎಂಟಿಎ ವೀಕ್ಷಿಸುವುದು. ಅವರು ನಿಯಮಿತ ಖುತ್‌ಬ ಜುಮುಅವನ್ನು ಆಲಿಸುತ್ತಿದ್ದರು ಮತ್ತು ನಮ್ಮನ್ನು ಜಮಾಅತ್‌ನ ಪುಸ್ತಕಗಳನ್ನು ಓದುವುದು ತುಂಬಾ ಪ್ರಯೋಜನಕಾರಿ ಎಂದು ವಿವರಿಸುತ್ತಿದ್ದರು. ಅವರು ಸ್ವತಃ ಪುಸ್ತಕಗಳನ್ನು ಓದುವ ಉತ್ಸಾಹವನ್ನು ಹೊಂದಿದ್ದರು ಮತ್ತು ಯಾವಾಗಲೂ ಅವರ ತಲೆಯ ಹತ್ತಿರ (ಮಲಗುವ ಜಾಗದಲ್ಲಿ) ಯಾವುದಾದರು ಪುಸ್ತಕಗಳು ಇರುತ್ತಿದ್ದವು. ಅವರು ತುಂಬಾ ಸ್ನೇಹಪರ ಮತ್ತು ಹತ್ತಿರವಾಗುತ್ತಿದ್ದರು. ನಾವು ಪವಿತ್ರ ಖುರ್‌ಆನ್‌ನ ಹೊಸ ಅಧ್ಯಾಯವನ್ನು ಕಂಠಪಾಠ ಮಾಡಿದಾಗಲೆಲ್ಲಾ ಅವರು ನಮಗೆ ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿದ್ದರು ಎಂದು ಅವರ ಮೊಮ್ಮಗಳು ಹೇಳುತ್ತಾರೆ. ಅವರು ಹೇಳುತ್ತಾರೆ, "ನಿಯಮಿತವಾದ ಫಜ್ರ್ ನಮಾಝ್‌ನ ನಂತರ, ಅವರು ದೀರ್ಘವಾದ ತಸ್ಬೀಹ್ ಮಾಡುವುದು ಮತ್ತು ದುಆಗಳನ್ನು ಮಾಡುತ್ತಿದ್ದರು, ಮತ್ತು ಅವರು ಬೆಳಿಗ್ಗೆ ತಯಾರಾದ ನಂತರ ಖುರ್‌ಆನ್ ಅನ್ನು ವ್ಯಾಖ್ಯಾನದೊಂದಿಗೆ ಓದಲು ನನ್ನನ್ನು ಉತ್ತೇಜಿಸುತ್ತಿದ್ದರು. ಹದೀಕತುಸ್ಸಾಲಿಹೀನ್ ಅಧ್ಯಾಯನ ಮಾಡುತ್ತಿದ್ದರು, ರೂಹಾನಿ ಖಝಾಈನ್ ಓದುತ್ತಿದ್ದರು, ನಂತರ ನಾಶ್ತ ಮಾಡುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ದಿವಂಗತರ ಮಗ್‌ಫಿರತ್ ಮತ್ತು ಕರುಣೆಯನ್ನು ನೀಡಲಿ. ಶ್ರೇಣಿಗಳನ್ನು ಹೆಚ್ಚಿಸಲಿ. ಅವರ ಸತ್ಕಾರ್ಯಗಳನ್ನು ಅವರ ಮಕ್ಕಳು ಸಹ ಮುಂದುವರಿಸುವಂತೆ ಮಾಡಲಿ. ಆಮೀನ್

ಮುಂದಿನ ಉಲ್ಲೇಖ ಮಾನ್ಯ ಸಾಕಿಬ್ ಕಾಮ್ರಾನ್ ಸಾಹಿಬ್, ಅವರು ನಮ್ಮ ವಾಖಿಫೆ ಝಿಂದಗಿಯಾಗಿದ್ದರು, ನಾಯಿಬ್ ವಕೀಲ್ ಸಮ್‌ಇ ಬಸರಿಯಾಗಿದ್ದರು ಅವರು ನಲವತ್ತೆರಡನೇ ವಯಸ್ಸಿನಲ್ಲಿ ನಿಧನರಾದರು. ಇದು ಫುಎ ಪೊಐಝುನಿಂಗ್ (ಆಹಾರ ವಿಷ) ಆಗಿರಬಹುದು ಎಂದು ವೈದ್ಯರು ಭಾವಿಸಿದ್ದಾರೆ. ಆದರೆ ಸಾಕಿಬ್ ಸಾಹಿಬ್ ಸಾಯುವ ಸುಮಾರು ನಲವತ್ತೈದು ನಿಮಿಷಗಳ ಮೊದಲು, ಅದೇ ಆಹಾರವನ್ನು ಸೇವಿಸಿದ ಅವರ ಪುತ್ರರಲ್ಲಿ ಒಬ್ಬನಾದ ಆರಬ್ ಕಾಮ್ರಾನ್ ಸಹ ಸಾವನ್ನಪ್ಪಿದ ದುರಂತವೂ ಸಂಭವಿಸಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಸಾಕಿಬ್ ಕಾಮ್ರಾನ್ ಸಾಹಿಬ್ ಅವರ ಮುತ್ತಜ್ಜ, ಗುರುದಾಸ್‌ಪುರದ ತಾಲುಂಡಿ ಜಂಗ್ಲಾನ್ ಜಿಲ್ಲೆಯ ಹಝ್ರತ್ ಚೌಧರಿ ಮೌಲಾ ಬಕ್ಷ್ ಸಾಹಿಬ್ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೈಅತ್ ಮಾಡುದ್ದರು. ಕಾಮ್ರಾನ್ ಸಾಹಿಬ್ ವಖ್ಫ್ ಮಾಡಿ, ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶಿಸಿ ಅಲ್ಲಿಂದ ಉತ್ತೀರ್ಣರಾಗಿ ಬೇರೆ ಬೇರೆ ಸ್ಥಳಗಳಲ್ಲಿ ನೇಮಕಗೊಂಡರು. ಅಲ್ಲಾಹನು ಅವರಿಗೆ ಒಬ್ಬ ಹೆಣ್ಣು ಮತ್ತು ಇಬ್ಬರು ಗಂಡು ಮಕ್ಕಳನ್ನು ಅನುಗ್ರಹಿಸಿದನು. ರುಮಿಸಾ ಕಾಶಿಫಾಗೆ ಹದಿನೇಳು ವರ್ಷ ಮತ್ತು ಗಾಲಿಬ್ ಕಾಮ್ರಾನ್ ಹದಿಮೂರು ವರ್ಷ ವಯಸ್ಸಿನವನಾಗಿದ್ದಾನೆ ಮತ್ತು ಅವರೊಂದಿಗೆ ಮೃತನಾದ ಮೂರನೇ ಮಗ. ಇಡೀ ಕುಟುಂಬವು ಅನಾರೋಗ್ಯಕ್ಕೆ ಒಳಗಾಯಿತು ಮತ್ತು ಸರ್ವಶಕ್ತನಾದ ಅಲ್ಲಾಹನು ಎಲ್ಲರನ್ನೂ ರಕ್ಷಿಸಿದನು.

ಜಾಮಿಯಾ ಉತ್ತೀರ್ಣರಾದ ನಂತರ, ನಝಾರತ್ ಇಸ್ಲಾಹ್ ವ ಇರ್ಷಾದ್‌ನಲ್ಲಿ ಅವರನ್ನು ನೇಮಿಸಲಾಯಿತು. ನಂತರ ಅವರನ್ನು ಹದೀಸ್ ವಿಷಯದಲ್ಲಿ ವಿಶೇಷತೆಗಾಗಿ ಆಯ್ಕೆ ಮಾಡಲಾಯಿತು. ಅದರ ನಂತರ ಅವರನ್ನು ವಕಾಲತ್ ತಅಲೀಮ್ ತೆಹ್ರೀಕ್ ಜದೀದ್‌ನ ಅಡಿಯಲ್ಲಿ ಅರೇಬಿಕ್ ಉನ್ನತ ಶಿಕ್ಷಣಕ್ಕಾಗಿ ಸಿರಿಯಾಕ್ಕೆ ಕಳುಹಿಸಲಾಯಿತು. ಆದರೆ ಅಲ್ಲಿನ ಪರಿಸ್ಥಿತಿಗಳಿಂದಾಗಿ ಅಥವಾ ಇನ್ನಾವುದೇ ಕಾರಣಕ್ಕಾಗಿ ಹಿಂತಿರುಗಿದರು. ನಂತರ ಡಿಸೆಂಬರ್ 2018 ರಲ್ಲಿ, ತೆಹ್ರೀಕ್–ಎ–ಜದೀದ್ ಸ್ಟುಡಿಯೋಗಳು ಪ್ರಾರಂಭವಾದಾಗ, ಅವರನ್ನು ನಾಯಿಬ್ ವಕೀಲ್ ಸಮ್‌ಇ ವ ಬಸರಿ ತೆಹ್ರೀಕ್–ಎ–ಜದೀದ್ ಆಗಿ ನೇಮಿಸಲಾಯಿತು ಮತ್ತು ಅವರು ಮೃತರಾಗುವವರೆಗೂ ಅದೇ ಸ್ಥಾನದಲ್ಲಿ ಸೇವೆ ಸಲ್ಲಿಸಿದರು. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಹದಿನೆಂಟು ವರ್ಷಗಳ ಕಾಲ ಸೇವೆ ಸಲ್ಲಿಸುವ ಅವಕಾಶವನ್ನು ನೀಡಿದನು.

ಅವರ ತಾಯಿ ಸಾದಿಖ ಬೇಗಮ್ ಸಾಹಿಬ ಹೇಳುತ್ತಾರೆ ಕಾಮ್ರಾನ್ ವಕ್ಫ್–ಇ–ನೋ ಯೀಜನೆಗಿಂತ ಮುಂಚೆಯೇ ಜನಿಸಿದರು, ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಅವರಿಗೆ ನನ್ನ ಎರಡು ಕಿರಿಯ ಮಕ್ಕಳಿಗೆ ವಖ್ಫೆ ನೌ ಯೋಜನೆಯಲ್ಲಿ ಸೇರಿಸಿಕೊಳ್ಳಿ ಎಂದು ವಿನಂತಿಸಿಕೊಂಡಾಗ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ)ರವರು ಅವರ ಈ ಕೋರಿಕೆಯನ್ನು ಸ್ವೀಕರಿಸಿದರು ಮತ್ತು ಅವರನ್ನು ಸೇರಿಸಿಕೊಂಡರು.

ಅವನ ಪತ್ನಿ ಹೇಳುತ್ತಾರೆ: ಅವರು ಬಹಳ ಉತ್ತಮ ವ್ಯಕ್ತಿತ್ವದವರಾಗಿದ್ದರು. ಪದಗಳಲ್ಲಿ ವಿವರಿಸುವುದು ಕಷ್ಟ. ನಮಾಝ್‌ಗಳನ್ನು ಬಹಳ ಕಾಳಜಿಯಿಂದ ನಿರ್ವಹಿಸುವವರು, ಖಿಲಾಫತ್ ಅನ್ನು ತೀವ್ರವಾಗಿ ಪ್ರೀತಿಸುವವರು, ಜಮಾಅತ್‌ನ ಅಮಾನತ್‌ಗಳನ್ನು ರಕ್ಷಿಸುವವರು, ಪ್ರತಿಯೊಂದು ಬಣ್ಣದಲ್ಲಿ, ಪ್ರತಿಯೊಂದು ಸಂಬಂಧದಲ್ಲಿ ಪ್ರಾಮಾಣಿಕ ಪ್ರೇಮಿಯಾಗಿದ್ದರು, ಜಮಾಅತ್‌ನ ಪ್ರತಿಯೊಬ್ಬ ವ್ಯಕ್ತಿಯ ಬಗ್ಗೆ ಕಾಳಜಿ ವಹಿಸುವವರು. ಮತ್ತು ತಮ್ಮ ಮಕ್ಕಳಿಗೆ ಉತ್ತಮ ರೀತಿಯಲ್ಲಿ ಶಿಕ್ಷಣ ನೀಡಲು ಪ್ರಯತ್ನಿಸುತ್ತಿದ್ದರು.

ಅವರ ತಾಯಿ ಹೇಳುತ್ತಾರೆ: ಪವಿತ್ರ ಖುರ್‌ಆನ್‌ನ ಆದೇಶವಿದೆ ಅಂದರೆ ತನ್ನ ಹೆತ್ತವರ ಮುಂದೆ “ಉಫ್ಫ್” ಎಂದು ಹೇಳಬಾರದು, ಅವರು ಎಂದಿಗೂ ಉಚ್ಛ ಧ್ವನಿಯಲ್ಲಿ ಮಾತನಾಡಲಿಲ್ಲ. ಅನ್ಯರ ರಹಸ್ಯಗಳನ್ನು ರಹಸ್ಯವಾಗಿಡುತ್ತಿದ್ದರು, ಕಛೇರಿಯ ರಹಸ್ಯಗಳನ್ನು ರಕ್ಷಿಸುತ್ತಿದ್ದರು, ಅವರ ಪತ್ನಿ ಹೇಳುತ್ತಾರೆ:  ಕೆಲವೊಮ್ಮೆ ನಮಗೆ ಹೊರಗಿನಿಂದ ವಿಷಯಗಳು ಕೇಳಿಬರುತ್ತಿದ್ದವು ಆದ್ದರಿಂದ ನಾವು ಅವರನ್ನು ಹೀಗೆ ಆಗಿದೆಯೇ? ಎಂದು ಕೇಳಿದಾಗ ಅವರು ಅದು ರಹಸ್ಯದ ವಿಷಯವಾಗಿತ್ತು, ನಾನು

ನಿಮಗೆ ಏನನ್ನೂ ಹೇಳಲಾರೆ ಎಂದು ಹೇಳುತ್ತಿದ್ದರು. ಬಾಜಮಾಅತ್ ನಮಾಝ್ ನಿರ್ವಹಿಸುವ ಕಡೆಗೆ ಹೆಚ್ಚಿನ ಗಮನವಿತ್ತು. ಅವರು ಮಕ್ಕಳಿಗೆ ಸಲಹೆ ನೀಡುತ್ತಿದ್ದರು ಮತ್ತು ಯಾವಾಗಲೂ ಮನೆ, ಮಕ್ಕಳು ಮತ್ತು ಹೆಂಡತಿಯನ್ನು ನೋಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅವರ ಅಗತ್ಯಗಳನ್ನು ಪೂರೈಸುವುದು, ಪ್ರತಿಯೊಂದು ಸಂಬಂಧದಲ್ಲೂ ನಿಷ್ಠೆಯ ಸಂಬಂಧವಿತ್ತು.

ನನ್ನ ತಂದೆ ಅತ್ಯಂತ ವಿನಮ್ರ, ಒಳ್ಳೆಯ, ಬಡವ-ಪ್ರೀತಿ, ತಿಳುವಳಿಕೆ, ದೂರದೃಷ್ಟಿ, ವಿಧೇಯ ಮತ್ತು ತಹಜ್ಜುದ್ ಪಠಿಸುವ ವ್ಯಕ್ತಿಯಾಗಿದ್ದರು ಎಂದು ಅವರ ಮಗಳು ರೋಮೆಸಾ ಹೇಳುತ್ತಾರೆ. ಅವರಲ್ಲಿ ತರಬೇತಿ ಮಾಡುವ ವಿಚಿತ್ರವಾದ ಮಾರ್ಗವಾಗಿತ್ತು. ಅವರು ತಮ್ಮ ಕಣ್ಣಿನ ಸಂಕೇತಗಳಿಂದ ವಿಷಯಗಳನ್ನು ವಿವರಿಸುತ್ತಿದ್ದರು. ಅವರು ಯಾವಾಗಲೂ ಉತ್ತಮ ತರಬೇತಿಯ ಬಗ್ಗೆ ಕಾಳಜಿ ವಹಿಸುತ್ತಿದ್ದರು ಮತ್ತು ನೀವು ವಖ್ಫೆ ನೌ ಆಗಿದ್ದರಿಂದ ಈ ಬಗ್ಗೆ ಎಚ್ಚರದಿಂದಿರಿ ಎಂದು ಯಾವಾಗಲೂ ಹೇಳುತ್ತಿದ್ದರು. ನಾನು ಅವರಿಗೆ ಅನೇಕ ವಿಷಯಗಳನ್ನು ಕೇಳುತ್ತಿದ್ದೆ, ಯಾವುದೇ ಪರಿಸ್ಥಿತಿ ಬಂದರೂ ಉತ್ತರಿಸಲು ಅವರು ಎಂದಿಗೂ ಹಿಂಜರಿಯಲಿಲ್ಲ ಎಂದು ಅವರ ಪುತ್ರಿ ಹೇಳುತ್ತಾರೆ.

ರೋಹನ್ ಅಹ್ಮದ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಆಗಿದ್ದಾರೆ, ಅವರು ಈಗ ಅಸೀರಾನೆ ರಾಹೆ ಮೌಲಾ ಆಗಿದ್ದಾರೆ. ಅವರು ಹೇಳುತ್ತಾರೆ ನನಗೆ ಅವರ ತರಬೇತಿ ಹಾಗೂ ಮೇಲ್ವಿಚಾರಣೆಯಲ್ಲಿ ದೀರ್ಘಕಾಲ ಕೆಲಸ ಮಾಡುವ ಅವಕಾಶ ಲಭಿಸಿತು. ಯಾವಾಗಲೂ ನನಗೆ ಒಳ್ಳೆಯ ಸ್ನೇಹಿತನಂತೆ ಮಾರ್ಗದರ್ಶನ ನೀಡುತ್ತಿದ್ದರು. ಅವರು ಬಹಳ ಸೌಮ್ಯ ಸ್ವಭಾವ, ಉತ್ತಮ ವ್ಯಕ್ತಿತ್ವ ಮತ್ತು ಅತ್ಯುತ್ತಮ ನಾಯಕತ್ವದ ಕೌಶಲ್ಯವನ್ನು ಹೊಂದಿದ್ದರು. ಅವರು ನಿಷ್ಠಾವಂತ ಸೇವಕರಾಗಿದ್ದರು. ಅವರ ಔದಾರ್ಯ ಮತ್ತು ಸಹಾನುಭೂತಿಯೂ ಅಪ್ರತಿಮವಾಗಿತ್ತು.

ಈ ಅಸೀರಾನ್‌ಗಾಗಿಯೂ (ಬಂಧಿತ) ದುಆ ಮಾಡಿರಿ, ಸರ್ವಶಕ್ತನಾದ ಅಲ್ಲಾಹನು ಅವರ ಶೀಘ್ರ ಬಿಡುಗಡೆಯನ್ನು ಒದಗಿಸಲಿ ಮತ್ತು ಮೃತರಿಗೆ ಸರ್ವಶಕ್ತನಾದ ಅಲ್ಲಾಹನು ಕ್ಷಮೆ ಮತ್ತು ಮಗ್‌ಫಿರತ್ ಅನ್ನು ನೀಡಲಿ. ಶ್ರೇಣಿಗಳನ್ನು ಹೆಚ್ಚಿಸಲಿ. ಅವರ ಕುಟುಂಬ, ಮಕ್ಕಳು, ಹೆಂಡತಿ, ತಾಯಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ ಮತ್ತು ಅವರ ಸದ್ಗುಣಗಳನ್ನು ಅವರ ಮಕ್ಕಳಿಗೆ ವರ್ಗಾಯಿಸಲಿ.

ಮೂರನೆಯ ಉಲ್ಲೇಖವು ಪ್ರೊ. ಡಾ॥ ಮುಹಮ್ಮದ್ ಇಸ್‌ಹಾಖ್ ದಾವುದ್ ಸಾಹಿಬ್ ಕೊತೊನೊ ಬೆನೆನ್ ಅವರದ್ದಾಗಿದೆ. ಅವರೂ ಇತ್ತೀಚೆಗಷ್ಟೇ ಅರವತ್ತನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರು ಬೆನಿನ್‌ನ ದೌಡಾ ಕುಟುಂಬಕ್ಕೆ ಸೇರಿದವರು, ಅವರು ಬೆನಿನ್‌ನಲ್ಲಿ ಅಹ್ಮದಿಯ್ಯತ್ ಅನ್ನು ಸ್ವೀಕರಿಸಲು ಮೊದಲಿಗರು. ಬೆನಿನ್‌ನ ಮೊದಲ ಅಹ್ಮದಿ ದಿ. ಮಾನ್ಯ ಜಿಕ್ರುಲ್ಲಾ ದಾವೂದ್ ಸಾಹಿಬ್ ಅವರ ದೊಡಪ್ಪ ಆಗಿದ್ದರು. ಅವರ ತಂದೆ, ದಿವಂಗತ ಈಸಾ ದಾವೂದ್ ಅವರು ಇಡೀ ಜೀವನ ಬೆನಿನ್‌ನ ರಾಷ್ಟ್ರೀಯ ಉಪ ಅಮೀರ್ ಆಗಿದ್ದರು. 1980 ರಲ್ಲಿ, ಅವರು ವಿದ್ಯಾರ್ಥಿಯಾಗಿದ್ದಾಗ, ದಿವಂಗತ ಜಿಕ್ರುಲ್ಲಾ ದಾವೂದ್ ಅವರ ತಬ್ಲೀಗ್‌ನ ಮೂಲಕ ಅವರು ಅಹ್ಮದಿಯತ್ ಅನ್ನು ಸ್ವೀಕರಿಸಿದರು. ಅಹ್ಮದೀಯತ್ ಅನ್ನು ಸ್ವೀಕರಿಸಿದ ನಂತರ, ಅವರು ತನ್ನ ದೊಡಪ್ಪನೊಂದಿಗೆ ತನ್ನ ತಂದೆ-ತಾಯಿಯರಿಗೆ ತಬ್ಲೀಗ್ ಮುಂದುವರೆಸಿದರು ಮತ್ತು ಸ್ವಲ್ಪ ಸಮಯದ ನಂತರ ಅವರ ತಾಯಿ ಮತ್ತು ತಂದೆ ಸಹ ಅವರ ತಬ್ಲೀಗ್‌ನ ಮೂಲಕ ಅಹ್ಮದೀ ಆದರು. 2022 ರಲ್ಲಿ, ಅವರು ಸೆನೆಗಲ್ ವಿಶ್ವವಿದ್ಯಾಲಯದಿಂದ ಪ್ರಾಣಿಶಾಸ್ತ್ರದಲ್ಲಿ ಪಿಎಚ್‌ಡಿ ಪದವಿ ಪಡೆದರು. ನಂತರ ಅವರು ಹಿಂತಿರುಗಿದರು ಮತ್ತು ಬೆನಿನ್‌ನ ಪ್ಯಾರಾಕೊ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅವರು ತಮ್ಮ ಸಾಮರ್ಥ್ಯದಿಂದ ಅನೇಕ ದೇಶೀಯ ಮತ್ತು ವಿದೇಶಿ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದರು. ಸುದೀರ್ಘ ಕಾಲ ಬೆನಿನ್‌ನ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಅವಕಾಶ ಲಭಿಸಿತು. ಅವರು ತಮ್ಮ ವಿದ್ಯಾರ್ಥಿ ದಿನಗಳಲ್ಲಿ ವಸಿಯ್ಯತ್ ಮಾಡಿದ್ದರು ಮತ್ತು ಬೆನಿನ್‌ನ ಅಹ್ಮದೀಯರಲ್ಲಿ ಮೊದಲ ಮೂಸಿ ಎಂಬ ಗೌರವವನ್ನು ಪಡೆದ ಮೊದಲಿಗರು ಎಂದು ಬರೆಯಲಾಗಿದೆ.

ಮದುವೆಯ ನಂತರ ನನ್ನ ಪತಿಯ ತಬ್ಲೀಗ್‌ನ ಮೂಲಕ ನಾನು ಅಹ್ಮದೀಯತ್ ಅನ್ನು ಸ್ವೀಕರಿಸಿದ್ದೇನೆ ಎಂದು ಪ್ರಸ್ತುತ ಲಜ್ನಾ ತರಬೇತಿಯ ರಾಷ್ಟ್ರೀಯ ಕಾರ್ಯದರ್ಶಿಯಾಗಿರುವ ಅವರ ಪತ್ನಿ ರೆಹಾನಾ ದೌದಾ ಸಾಹಿಬಾ ಹೇಳುತ್ತಾರೆ. ಅವರು ನನಗೆ ಯಸರ್ನಲ್ ಖುರ್‌ಆನ್ ಮತ್ತು ನಂತರ ಪವಿತ್ರ ಖುರ್‌ಆನ್ ಕಲಿಸಿದರು. ಅವರು ಅತ್ಯಂತ ಉದಾತ್ತ, ಪ್ರಾಮಾಣಿಕ, ಸಹಾನುಭೂತಿಯ ವ್ಯಕ್ತಿಯಾಗಿದ್ದರು. ಜಮಾಅತ್‌ನ ಕೆಲಸಕ್ಕೆ ಸದಾ ಸಿದ್ಧರಾಗಿದ್ದರು. ಅವರು ನಿಯಮಿತವಾಗಿ ತಹಜೂದ್ ನಿರ್ವಹಿಸುವವರಾಗಿದ್ದರು. ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳು ನಮ್ಮ ಮನೆಯ ಮೇಲೆ ಇಳಿಯಲು ಅವರು ನನ್ನನ್ನು ಮನೆಯಲ್ಲಿ ಪವಿತ್ರ ಖುರ್‌ಆನ್ ಓದಲು ನನಗೆ ಯಾವಾಗಲು ಉಪದೇಶಿಸುತ್ತಿದ್ದರು ಮತ್ತು ಹೇಳುತ್ತಿದ್ದರು.

ಅವರು ಹೇಲುತ್ತಾರೆ: ಅವರು ವಿಶ್ವವಿದ್ಯಾನಿಲಯದಲ್ಲಿ ವೈಸ್ ಡೀನ್ ಹುದ್ದೆಗೆ ಬಂದಾಗ ಒಂದು ದಿನ ಒಬ್ಬ ಮಹಿಳೆ ಅಳುತ್ತಾ ಬಂದು ಹೇಳಿದಳು. ನನ್ನ ಹುಡುಗಿ ಫೇಲ್ ಆಗುತ್ತಿದ್ದಾಳೆ ಅವಳನ್ನು ಪಾಸ್ ಮಾಡಿ, ಅವಳು ಪಾಸಾಗದಿದ್ದರೆ ನನ್ನ ಗಂಡ ಅವಳ ಫೀಸನ್ನು (ಶುಲ್ಕವನ್ನು) ಕೊಡುವುದಿಲ್ಲ ಮತ್ತು ಅವಳನ್ನು ಹೊಡೆಯುತ್ತಾನೆ. ಮತ್ತು ಆಕೆಯು ಬಹಳಷ್ಟು ಹಣವನ್ನು ಸಹ ತಂದು ಇದನ್ನು ನಿವು ಇಟ್ಟುಕೊಳ್ಳಿ ಎಂದು ಹಏಳಿದಳು. ಅದಕ್ಕೆ ಅವರು ಹೇಳಿದರು: ಹೀಗೆ ಹಣ ಕೊಟ್ಟು ಪಾಸಾಗಬೇಕಾದರೆ ಬಡವರು ಎಂದೂ ಪಾಸಾಗುವುದಿಲ್ಲ. ನೀನು ಹೀಗೆ ಮಾಡು, ನೀನು ನನಗೆ ಲಂಚ ಕೊಡಲು ತಂದ ಹಣವನ್ನು, ನಾನು ಅಹ್ಮದಿಯಾಗಿದ್ದೇನೆ, ಹಾಗಾಗಿ ನಾನು ಅಂತಹ ಕೆಲಸ ಮಾಡಲಾರೆ. ನೀನು ಈ ಹಣವನ್ನು ತನ್ನಲ್ಲಿ ಇಡು ಮತ್ತು ಇದನ್ನೆ ಫೀಸ್ ಶುಲ್ಕವನ್ನಾಗಿ ನೀಡು ಮತ್ತು ಈ ಹಣ ಸಾಕಾಗದಿದ್ದರೆ ನಾನಿ ಇನ್ನುಳಿದ ಹಣವನ್ನು ನೀಡುತ್ತೇನೆ ಆದರೆ ಲಂಚ ತೆಗೆದುಕೊಂಡು ಅವಳನ್ನು ಪಾಸ್ ಮಾಡಲು ಈ ಶಿಫಾರಸು ಮಾಡಲಾಗುವುದಿಲ್ಲ. ಆದರೆ ಆಕೆಯು ಹಣದ ಆ ಚೀಲವನ್ನು ಅಲ್ಲಿಯೇ ಬಿಟ್ಟಳು. ಅವರ ಪತ್ನಿ ಈ ಚೀಲವನ್ನು ತೋರಿಸಿ, ಅದನ್ನು ಎತ್ತಿಕೊಂಡು ಲೆಕ್ಕಪರಿಶೋಧಕನಿಗೆ ನೀಡಿದರು, ಅವರು ಈ ಮಹಿಳೆಯನ್ನು ಕೇಳಿದರು, "ನನ್ನ ಮನೆಯ ಬಗ್ಗೆ ನಿಮಗೆ ಯಾರು ಹೇಳಿದರು?" ನಿಮಗೆ ನನ್ನ ಪರಿಚಯವಿಲ್ಲ. ಅದಕ್ಕೆ ಅವರು ಹೇಳಿದರು ನನಗೆ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧಕರು ಹೇಳಿದರು. ಏನೇ ಇರಲಿ ಅವರು ಅಕೌಂಟೆಂಟ್ ಬಳಿ ಹೋಗಿ ಹಣ ಕೊಟ್ಟು ವಾಪಸ್ ಕೊಡುವಂತೆ ಕೇಳಿಕೊಂಡರು. ವಿಶ್ವವಿದ್ಯಾನಿಲಯದ ಸಭೆ ಕರೆದು ಈ ವಿಷಯವನ್ನು ಅಲ್ಲಿ ಮಂಡಿಸಿ ತಿಳಿಸಿದರು. ಹೀಗೆ ಅಲ್ಲಿ ನೆರೆದಿದ್ದ ಎಲ್ಲಾ ಪ್ರಾಧ್ಯಾಪಕರು ಕಾರ್ಯನಿರ್ವಾಹಕರು, ಅವಳು ಮೂರು ನೂರು ಸಾವಿರ ಫ್ರಾಂಕ್ಗಳನ್ನು ತಂದಿದ್ದಳು ಮತ್ತು ಇದು ಒಂದೂವರೆ ನೂರು ಸಾವಿರ ಎಂದು ಹೇಳಿದರು. ಅವರು ಅಕೌಂಟೆಂಟ್‌ನಿಂದ ಮೋಸ ಹೋಗಿದ್ದಾರೆ, ಆದ್ದರಿಂದ ಅವರ ವಿರೋಧಿಗಳು ಲಂಚದ ಆರೋಪ ಹೊರಿಸಿ ಉಪ ಡೀನ್‌ನ ಹುದ್ದೆಯಿಂದ ಅವರಿಗೆ ವಜಾಗೊಳಿಸಬೇಕೆಂದು ಬಯಸಿದ್ದರು, ಆದರೆ ಅವರು ಯಶಸ್ವಿಯಾಗಲಿಲ್ಲ ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಅವರ ಸಹೋದ್ಯೋಗಿಗಳು ನಂತರ ಅವರು ತುಂಬಾ ಪ್ರಾಮಾಣಿಕ ವ್ಯಕ್ತಿ ಎಂದು ಬಹಿರಂಗಪಡಿಸಿದರು. ಅವರು ಯಾವಾಗಲೂ ತಮ್ಮ ನೆರೆಹೊರೆಯ ಬಡ ವಿಧವೆಯರನ್ನು ನೋಡಿಕೊಳ್ಳುತ್ತಿದ್ದರು. ಯಾರದೋ ಮನೆಯನ್ನು ರಿಪೇರಿ ಮಾಡುತ್ತಿದ್ದರು. ಮಕ್ಕಳಿಗೆ ಸಾಂತ್ವನ ನೀಡುವುದು. ಪ್ರತಿಯೊಬ್ಬ ಸದಸ್ಯರನ್ನು ಪ್ರೀತಿಸುತ್ತಿದ್ದರು. ಪರಾಕೊ ವಿಶ್ವವಿದ್ಯಾನಿಲಯದ ಕೃಷಿ ವಿಭಾಗದ ಅನೇಕ ಪ್ರಾಧ್ಯಾಪಕರು ಅವರ ನಿಧನದ ಸಂತಾಪ ಸೂಚಿಸಲು "ಕೊಟೊನೌ" ಗೆ ಬಂದರು. ವಿಭಾಗದ ಪ್ರಭಾರಿ ಪ್ರಾಧ್ಯಾಪಕ ಡಾ.ಇಬ್ರಾಹಿಂ ಮಾತನಾಡಿ ಹೇಳಿದರು: ಅತ್ಯಂತ ವಿನಮ್ರ ಹಾಗೂ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ವಿಶ್ವವಿದ್ಯಾನಿಲಯದಲ್ಲಿ ಅವರನ್ನು ಪಾಪಾ ಬೊನ್ನೂರ್ ಎಂದು ಕರೆಯಲಾಗುತ್ತಿತ್ತು, ಇದು ಫ್ರೆಂಚ್ ಪದವಾಗಿದೆ ಅದರ ಅರ್ಥ "ಎಲ್ಲರನ್ನು ಅನುಗ್ರಹಿಸುವುದು". ಅಗತ್ಯವಿರುವ ಎಲ್ಲರಿಗೂ ಸಹಾಯ ಮಾಡುವುದು. ಜೇಬಿನಲ್ಲಿದ್ದದ್ದನ್ನೆಲ್ಲ ಕೊಡುತ್ತಿದ್ದ ಅವರು ಯಾರನ್ನು ಖಾಲಿ ಕೈ ಹಿಂದಿರುಗಿಸಲಿಲ್ಲ. ಅವರು ಸರ್ವಶಕ್ತನಾದ ಅಲ್ಲಾಹನಲ್ಲಿ ಬಹಳ ವಿಶ್ವಾಸ ಹೊಂದಿದ್ದರು.

ಇಸ್‌ಹಾಖ್ ದೌದಾ ಸಾಹಿಬ್ ಅವರಿಗೆ ಹಝ್ರತ್ ಪೈಗಂಬರ್(ಸ) ಅವರಿಂದ, ಹಝ್ರತ್ ಮಸೀಹ್ ಮೌಊದ್(ಸ) ಮತ್ತು ಖಿಲಾಫತ್‌ನ ಬಗ್ಗೆ ಅಪರಿಮಿತ ಪ್ರೀತಿಯನ್ನು ಹೊಂದಿದ್ದರು. ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಇದ್ದ ಪ್ರೀತಿಯ ಸ್ಥಿತಿ ಹೇಗಿತ್ತು ಎಂದರೆ ಹಝ್ರತ್ ಪೈಗಂಬರ್(ಸ) ಅವರ ವಯಸ್ಸು ಅರವತ್ತಮೂರು ವರ್ಷಗಳಾಗಿದ್ದರಿಂದ ಅವರು ಯಾ ಅಲ್ಲಾಹ್!! ನನಗೆ ಅದಕ್ಕಿಂತ ಹೆಚ್ಚಿನ ಜೀವನವನ್ನು ನೀಡಬೇಡ ಎಂದು ಪ್ರಾರ್ಥಿಸುತ್ತಿದ್ದರು.

ಹೃದಯ ಸಂಬಂಧಿ ಕಾಯಿಲೆ ಇತ್ತು. ಹೃದಯ ಶಸ್ತ್ರಚಿಕಿತ್ಸೆಗಾಗಿ ಫ್ರಾನ್ಸ್‌ಗೆ ಹೋದಾಗ ಅಲೈಸಲ್ಲಾಹ್‌ದ ಉಂಗುರವನ್ನು ಧರಿಸಿದ್ದರು ಎಂದು ಓರ್ವ ಮುಬಲ್ಲಿಗ್ ಸಾಹಿಬ್ ಹೇಳುತ್ತಾರೆ. ವೈದ್ಯರು ಅದನ್ನು ತೆಗೆಯಲು ಪ್ರಾರಂಭಿಸಿದಾಗ, ಅವರು ಈ ಉಂಗುರವನ್ನು ತೆಗೆಯಬಾರದು ಎಂದು ಹೇಳಿದರು. ಇದು ಸಾಯುವವರೆಗೂ ನನ್ನೊಂದಿಗೆ ಇರುತ್ತದೆ ಏಕೆಂದರೆ ಇವುಗಳನ್ನು ನಾನು ಯಾವಾಗಲೂ ನೆನಪಿಸಿಕೊಳ್ಳುವ ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳಾಗಿವೆ.

ಇಂದು ಪ್ರಸ್ತುತ ಖಾಯೆಮ್ ಮಖಾಮ್ ಅಮೀರ್ ಮತ್ತು ಮುಬಲ್ಲಿಗ್ ಇಂಚಾರ್ಜ್ ಆಗಿರುವ ಮಿಯಾನ್ ಖಮರ್ ಹೇಳುತ್ತಾರೆ:

ನಾನು ಪರಾಕು ಪ್ರಾಂತ ಮುಬಲ್ಲಿಗ್ ಆಗಿದ್ದಾಗ ತನಗೆ ಬಂದ ಸಂಬಳವೇನಿದ್ದರೂ ತನ್ನ ವಸಿಯ್ಯತ್ ಮತ್ತಿತರ ಚಂದಗಳನ್ನು ಒಂದು ಲಕೋಟೆಯಲ್ಲಿ ಹಾಕಿ ಮಸೀದಿಗೆ ತಂದು ನನ್ನ ರಸೀದಿಯನ್ನು ಹಾಕಿ ಎಂದು ಹೇಳುತ್ತಿದ್ದರು. ಅವರು ಯಾವಾಗಲೂ ಮುಗುಳ್ನಗುತ್ತಿದ್ದರು ಮತ್ತು ಪ್ರತಿ ತೊಂದರೆ ಮತ್ತು ಸಮಸ್ಯೆಯಲ್ಲೂ ಅವರು ನಾನು ಪ್ರಾರ್ಥಿಸುತ್ತಿದ್ದೇನೆ ಎಂದು ಹೇಳುತ್ತಿದ್ದರು ಮತ್ತು ಖಲೀಫಾರ ಸೇವೆಯಲ್ಲಿಯೂ ಪ್ರಾರ್ಥನೆಗಾಗಿ ಪತ್ರವನ್ನು ಬರೆದಿದ್ದೇನೆ ಎಂದು ಹೇಳುತ್ತಿದ್ದರು, ಸರ್ವಶಕ್ತನಾದ ಅಲ್ಲಾಹನು ಅದನ್ನು ಸುಲಭಗೊಳಿಸುತ್ತಾನೆ.

ಪತ್ನಿಯಲ್ಲದೆ ಇಬ್ಬರು ಪುತ್ರಿಯರು ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಹಿರಿಯ ಮಗಳು ಅಝೀಝಾ ಮೊಕಿಸ್ತಾ ದೌದಾ ಕೃಷಿಯಲ್ಲಿ ಪಿಎಚ್‌ಡಿ ವ್ಯಾಸಂಗ ಮಾಡುತ್ತಿದ್ದಾರೆ. ಪುತ್ರರಾದ ರಕೀಬ್ ದೌದಾ ಮತ್ತು ಮಸ್ರೂರ್ ದೌದಾ ಕಂಪ್ಯೂಟರ್ ಓದುತ್ತಿದ್ದಾರೆ. ಅಲ್ಲಾಹನು ಈ ಮಕ್ಕಳನ್ನು ಅವರ ತಂದೆಯ ಹಾದಿಯಲ್ಲಿ ನಡೆಸಲಿ ಮತ್ತು ಮೃತರಿಗೆ ಮಗ್‌ಫಿರತ್ ಮತ್ತು ಕರುಣೆಯನ್ನು ನೀಡಲಿ. ಶ್ರೇಣಿಗಳನ್ನು ಹೆಚ್ಚಿಸಲಿ. ನಮಾಝ್ ನಂತರ, ಇನ್‌ಶಾಅಲ್ಲಾಹ್ ನಮಾಝೆ ಜನಾಝು ಇರುತ್ತದೆ.

*(ಪುಟ ಸಂಖ್ಯೆ 02ರ ಉಳಿದ ಭಾಗ)*

ವಿಷಯವಾಗಿದೆ. ಇದು ಎಂತಹ ವಿಚಿತ್ರ ಮಾತಾಗಿದೆ. ದೇವನಾದವನು ಮೂರು ದಿನ ಮೃತಪಟ್ಟನು. ಆದರೆ ಅವನ ದಾಸರು ಮೂರು ದಿನ ದೇವನಿಲ್ಲದೆ ಬದುಕಿಕೊಂಡರು. (ಚಶ್ಮ ಮಸೀಹ, ರೂಹಾನಿ ಖಝಾಈನ್, ಸಂಪುಟ–20, ಪುಟ–371)

ತೌರಾತ್ ಮತ್ತು ಇಂಜಿಲಿನಲ್ಲಿ (ಬೈಬಲ್) ನಲ್ಲಿ ತ್ರೀತ್ವ ಶಿಕ್ಷಣದ ಬಗ್ಗೆ ಲವಶೇಶವು ಇಲ್ಲ

ಹಝ್ರತ್ ಮಸೀಹ್ ಮೌಊದ್(ಅ) ಅವರ ತ್ರೀತ್ವ ವಿಶ್ವಾಸವನ್ನು ಪ್ರಬಲ ಸಾಕ್ಷ್ಯಗಳೊಂದಿಗೆ ರದ್ದುಪಡಿಸಿದರು. ಆದ್ದರಿಂದ ಯೋಚಿಸಬೇಕು. ಇಂತಹ ವ್ಯಕ್ತಿಯನ್ನು ತನ್ನ ಹಿತಾಸಕ್ತಿಯೆಂದು ಹೇಗೆ ನೇಮಿಸಲು ಸಾಧ್ಯ. ಅವನು ಎಲ್ಲ ಸಮಯ, ಪ್ರತಿಕ್ಷಣ ಅವರ ಧರ್ಮವನ್ನು ಕಿತ್ತೆಸೆಯಲು ಸಿದ್ಧನಾಗಿದ್ದಾನೆ. ನೋಡಿರಿ, ಎಷ್ಟೊಂದು ಪ್ರಬಲ ಸಾಕ್ಷ್ಯಗಳೊಂದಿಗೆ ಅವರು ತ್ರೀತ್ವವನ್ನು ರದ್ದುಪಡಿಸಿದರು. ಇದು ಸಮುದ್ರದ ಮುಂದೆ ಒಂದು ಹನಿಯಂತಿದೆ.

"ತ್ರೀತ್ವವನ್ನು ಕೇವಲ ಪವಿತ್ರ ಖುರ್‌ಆನ್ ರದ್ದುಪಡಿಸುವುದಿಲ್ಲ. ಬದಲಿಗೆ ತೌರಾತ್ ಸಹ ರದ್ದುಪಡಿಸುತ್ತದೆ. ಏಕೆಂದರೆ ಮೂಸಾ(ಅ) ರವರ ತೌರಾತ್‌ನಲ್ಲಿ ತ್ರೀತ್ವ ಬಗ್ಗೆ ವಿವರವೇ ಇಲ್ಲ, ಸಂಕೇತ ಸಹ ಇಲ್ಲ, ತೌರಾತ್‌ನಲ್ಲಿ ಈ ದೇವರುಗಳ ಬಗ್ಗೆ ಮಾಹಿತಿಯಿರುತ್ತಿದ್ದರೆ, ಯಹೂದ್ಯರು ಅದನ್ನು ಮರೆಯುತ್ತಿರಲಿಲ್ಲ. ನಾನು ಈ ಬಗ್ಗೆ ಸ್ವಯಂ ಪ್ರಯತ್ನಪಟ್ಟು ಕೆಲವು ಯಹೂದಿಯರನ್ನು ಪ್ರಮಾಣ ಮಾಡಿ ಹೇಳಲು ಕೇಳಿದ್ದೆ. ತೌರಾತ್‌ನಲ್ಲಿ ದೇವರುಗಳ ಬಗ್ಗೆ ನಿಮಗೆ ಯಾವ ಶಿಕ್ಷಣ ನೀಡಲಾಗಿತ್ತು? ತ್ರೀತ್ವದ ಬಗ್ಗೆ ಶಿಕ್ಷಣ ನೀಡಲಾಗಿತ್ತೆ? ಅಥವಾ ಬೇರೆ ರೀತಿಯದ್ದು, ಯಹೂದಿಯರು ಬರೆದ ಪತ್ರದ ಉತ್ತರ ಅದು ಇಲ್ಲಿಯವರೆಗೂ ನನ್ನ ಬಳಿಯಿದೆ. ಆ ಪತ್ರಗಳಲ್ಲಿ ವಿವರವಿದೆ. ತೌರಾತ್‌ನಲ್ಲಿ ತ್ರೀತ್ವ ಬಗ್ಗೆ ಹೇಳಲು ಹೆಸರೇ ಇಲ್ಲ. ಬದಲು ತೌರಾತಿನ ಶಿಕ್ಷಣ ಖುರ್‌ಆನ್‌ನ ಶಿಕ್ಷಣದಂತೆಯೇ ಇದೆ. ಆದ್ದರಿಂದ ವಿಷಾದವಿದೆ. ಈ ಸಮುದಾಯದ ಮೇಲೆ ಇಂತಹ ವಿಶ್ವಾಸದ ಮೇಲೆ ಹಟಹಿಡಿದು ನಿಂತಿದೆ. ಇಂತಹ ಶಿಕ್ಷಣ ತೌರಾತ್‌ನಲ್ಲೂ ಇಲ್ಲ. ಖುರ್‌ಆನ್‌ನಲ್ಲೂ ಇಲ್ಲ. ಬದಲು ಸತ್ಯ ಹೇಳಬೇಕಾದರೆ ಇಂಜೀಲ್‌ನಲ್ಲೂ ಇಲ್ಲ.

(ಚಶ್ಮ ಮಸೀಹಿ, ರೂಹಾನಿ ಖಝಾಈನ್, ಸಂಪುಟ–20, ಪುಟ–373)

ಪ್ರಸಕ್ತ ಪಾದರಿಗಳ ಹೊರತು ಬೇರೆ ಒಂದು ದಜ್ಜಾಲ್ ಇದೆ ಎಂಬ ಮಾತು ಯಾವ ವಿಧದಲ್ಲೂ ಸರಿಯಾಗಿರಲಿಕ್ಕಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಪಾದರಿಗಳನ್ನು ಈ ಕಾಲಘಟ್ಟದ ದಜ್ಜಾಲ್ ಎಂದು ಸಾಬೀತುಪಡಿಸಿದ್ದಾರೆ. ಈ ದಜ್ಜಾಲ್ ಪ್ರಕಟಗೊಳ್ಳುವ ಕುರಿತು ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದರು ಮತ್ತು ಹೇಳಿದರು. ಇದರಿಂದ ಇಸ್ಲಾಂ ಧರ್ಮಕ್ಕೆ ಹಾನಿಯುಂಟಾಗುವುದು. ಆದರೆ ವಾಗ್ದತ್ತ ಮಸೀಹರಿಂದ ಅದು ನಾಶಗೊಳ್ಳುವುದು. ಹಿಗಿರುವಾಗ ಬ್ರಿಟಿಷರು ಮಸೀಹ್ ಮೌಊದ್(ಅ) ರವರನ್ನು ಹೇಗೆ ಜೊತೆಯಲ್ಲಿರಿಸಲು ಸಾಧ್ಯ. ಆದ್ದರಿಂದ ಇದು ಎಂತಹ ಟೊಳ್ಳು ಅಪವಾದವಾಗಿದೆ. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್ ಮಹದಿ ಮೌಊದ್ ಅವರನ್ನು ಬ್ರಿಟಿಷರು ನಿಲ್ಲಿಸಿದ್ದರು ಎಂಬುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ನಿಘಂಟಿನಲ್ಲಿ ಸುಳ್ಳುಗಾರರ ಗುಂಪನ್ನು ದಜಾಲ್ ಎನ್ನುತ್ತಾರೆ. ಅದು ಸತ್ಯವನ್ನು ಸುಳ್ಳಿನೊಂದಿಗೆ ಬೆರೆಸಿಬಿಡುತ್ತದೆ. ಅಲ್ಲಾಹನ ದಾಸರನ್ನು ದಾರಿ ತಪ್ಪಿಸಲು ಹೇಯ ಮತ್ತು ಸುಳ್ಳನ್ನು ಬಳಸುತ್ತಾರೆ. ಈಗ ನಾನು ಪಣತೊಟ್ಟಿ ಹೇಳುವೆನು. ಮುಸ್ಲಿಂ ಹದೀಸಿನ ಪ್ರಕಾರ ಅದು ಈಗಷ್ಟೇ ವಿವರಿಸಿದ್ದೇನೆ. ನಾವು ಹಝ್ರತ್ ಆದಂ(ಅ) ರವರ ಹುಟ್ಟಿನಿಂದ ಹಿಡಿದು ಇಲ್ಲಿಯವರೆಗಿನ ಬರಹಗಳನ್ನು ನಮಗೆ ದೊರೆತಿದ್ದನ್ನು ಅನುಸರಿಸಿ ಹೇಳುವುದಾದರೆ ದಜ್ಜಾಲಿಯತ್ ಸುಳ್ಳಿನಿಂದ ಮೊಸಗೊಳಿಸುವ ಕೆಲಸ ಹೊಣೆ ಹೊತ್ತವರಲ್ಲಿ ಪ್ರಸಕ್ತ ಪಾದರಿಗಳನ್ನು ಹೊರತುಪಡಿಸಿದರೆ ಎಲ್ಲೂ ದೊರೆಯದು.

(ಇಝಾಲಾ ಅವ್‌ಹಾಮ್, ರೂಹಾನಿ ಖಝಾಈನ್, ಸಂಪುಟ–3, ಪುಟ–362)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಬಹಲಷ್ಟು ದಜ್ಜಾಲ್ ಅಗಲಿ ಹೋಗಿದ್ದಾರೆ. ಮುಂದೆಯೂ ಬರಬಹುದು. ಆದರೆ ಮಹಾ ದಜ್ಜಾಲ್ ಅವನ ದಜ್ಜಾಲ್ (ಸುಳ್ಳು) ಅಲ್ಲಾಹನ ದೃಷ್ಟಿಯಲ್ಲಿ ಎಷ್ಟೊಂದು ಹೇಯವಾಗಿದೆ. ಮಣ್ಣಿನ ಮಗ ಒಂದೊಂದನ್ನು ದೇವನನ್ನಾಗಿ ಮಾಡುವ ಈ ಗುಂಪಿನ ವೈಖರಿಯಿಂದ ಆಕಾಶವು ಛಿದ್ರ ಛಿದ್ರವಾಗಿ ಹೋಗಬಹುದು.

(ಅಂಜಾಮ್ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–46)

ಪಾದರಿಗಳಿಗೆ ಇಸ್ಲಾಮ್‌ನ ಪ್ರಚಾರ ಮತ್ತು ಇಸ್ಲಾಮ್‌ನ ಅನುಗ್ರಹಗಳು ಹಾಗೂ ದೃಷ್ಟಾಂತಗಳ ಕುರಿತು ಎದುರಿಸಲು ಆಹ್ವಾನ ನಾವು ತುಂಬಾ ಆದರದಿಂದ ಕೇಳಬಯಸುತ್ತೇವೆ. ಬ್ರಿಟಿಷರು ತಮ್ಮ ಪಾದರಿಗಳ ಉಸಿರುಗಟ್ಟಿಸಿದ ವ್ಯಕ್ತಿಯೊಂದಿಗೆ ಮೈತ್ರಿ ಸಾಧಿಸಿದ್ದಾರೆ? ತಮ್ಮ ದೇಶೀಯ ಪಾದರಿಗಾಗಲಿ ಅಥವ ವಿದೇಶಿಗಾಗಲಿ ಅವರನ್ನು ಎದುರಿಸುವ ಅವರ(ಅ) ಎದುರು ಬಾಯಿ ತೆರೆಯಲು ಸಹ ಶಕ್ತಿ ಇರಲಿಲ್ಲ. ಹಾಗೆ ಬ್ರಿಟಿಷರು ಇಂತಹ ವ್ಯಕ್ತಿಯಿಂದ ನಬಿಯ ವಾದ ಮಾಡಲು ಹೇಳುವುದುದೇ? ಅವರು ಪಾದರಿಗಳ ಬಾಯಿ ಮುಚ್ಚಿಸಿದ್ದರು. ಅವರ ಜೀವನ ದುಸ್ತರಗೊಳಿಸಿದ್ದರು. ಅವರನ್ನು ನಿಲ್ಲಿಸಿದ್ದರು ಎಂಬುದು ಎಷ್ಟೊಂದು ಹಾಸ್ಯಾಸ್ಪದ ಮಾತಾಗಿದೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಯಾವ ರೀತಿ ಪಾದರಿಗಳಿಗೆ ಇಸ್ಲಾಮಿನ ಸಂದೇಶ ನೀಡಿದರು. ಯಾವ ರೀತಿ ಅವರನ್ನು ಪದೇ ಪದೇ ಪಂಥಾಹ್ವಾನ ನೀಡಿದರು. ಪದೆ ಪದೆ ಎದುರಿಗೆ ಬರಲು ಆಹ್ವಾನಿಸಿದರು. ಅವರನ್ನು ಯಾವ ರೀತಿ ಹುಂಕರಿಸಿದರು, ಅದರ ಒಂದು ಸಣ್ಣದಾದ ನೋಟ ಪ್ರಸ್ತುತವಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾಲ್ಕನೇ ಲಕ್ಷಣ ಈ ವಿನೀತನ ಸತ್ಯತೆಯ ಬಗ್ಗೆ ಏನಾಗಿದೆ ಎಂದರೆ ಸುಮಾರು ಹನ್ನೆರಡು ಸಾವಿರ ಪತ್ರಗಳು, ದಿವ್ಯವಾಣಿ ಜಾಹಿರಾತುಗಳ ಕಾರುಣ್ಯಗಳ ಎದುರಾಗಿ ಇತರ ಧರ್ಮಗಳಿಗೆ ಆಹ್ವಾನ ನೀಡಿದರು. ವಿಶೇಷವಾಗಿ ಪಾದರಿಗಳಲ್ಲಿ ಬಹುಶಃ ಒಬ್ಬನು ಸಹ ಉಳಿದಿರಲಿಲ್ಲವೇನು. ಅವು ಯೂರೋಪ್ ಪಾದರಿಗಳಾಗಲಿ, ಅಮೇರಿಕಾ ಅಥವಾ ಭಾರತದ ಪಾದರಿಗಳಾಗಲಿ ಅವರಿಗೆ ರಿಜಿಸ್ಟ್ರಿ ಮೂಲಕ ಪತ್ರ ಕಳುಹಿಸದೆ ಇರಲಿಲ್ಲ. ಆದರೆ ಎಲ್ಲರ ಮೇಲೆ ಸತ್ಯದ ಭಯ ಆವರಿಸಿತ್ತು.

(ಆಯಿನಾ ಕಮಾಲಾತೆ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–5, ಪುಟ–347)

ಭಾರತ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ರಷ್ಯಾ ಮತ್ತು ರೋಮ್‌ನಲ್ಲಿ ಸುಮಾರು ಹದಿನಾರು ಸಾವಿರ ಮತಪಂಡಿತರಿದ್ದಾರೆ. ಯಹೂದಿ ವಿದ್ವಾಂಸರಿಗೆ, ಮಜೂಸಿಗಳ ಪುರೋಹಿತರಿಗೆ ಮತ್ತು ಕ್ರಿಸ್ತ ಪಾದರಿಗಳಿಗೆ ಪುರೋಹಿತರಿಗೆ ಬ್ರಿಟಿಷ್‌ಗಳಿಗೆ ಈ ಲೇಖನವನ್ನು ನೊಂದಾಯಿಸಿ ಪತ್ರಗಳನ್ನು ಕಳುಹಿಸಿದ್ದಾರೆ. ವಾಸ್ತವವಾಗಿ ಇಸ್ಲಾಂ ಧರ್ಮವು ಜಗತ್ತಿನಲ್ಲಿ ನಿಜವಾದ ಧರ್ಮವಾಗಿದೆ ಮತ್ತು ಇತರ ಎಲ್ಲಾ ಧರ್ಮಗಳು ವಾಸ್ತವದಿಂದ ಹಾಗೂ ಸತ್ಯದಿಂದ ದೂರವಾಗಿವೆ. ಯಾವ ವಿರೋಧಿಗಳಿಗೂ ಇದರಲ್ಲಿ ಸಂಶಯವಿದ್ದರೆ ನಮ್ಮ ಎದುರಿಗೆ ಬರಲಿ ಮತ್ತು ಒಂದು ವರ್ಷದವರೆಗೆ ಇದ್ದು, ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಸತ್ಯವಾದ ದೃಷ್ಟಾಂತಗಳನ್ನು ಅನುಭವಿಸಲಿ. ನಾವು ತಪ್ಪಿತಸ್ಥರಾದಲ್ಲಿ ನಮ್ಮಿಂದ ತಿಂಗಳುವಾರು ರೂ. 200/– ದಂಡ ಒಂದು ವರ್ಷದ್ದು ಪಡೆದುಕೊಳ್ಳಲಿ. ನಾವು ಅವರಿಂದ ಏನೂ ಬೇಡುವುದಿಲ್ಲ. ಕೇವಲ ಇಸ್ಲಾಂ ಧರ್ಮ ಸ್ವೀಕರಿಸಿದರೆ ಸಾಕು. ಅವರು ಬಯಸಿದರೆ ಅವರ ನೆಮ್ಮದಿಗಾಗಿ ಆ ರೂಪಾಯಿಯನ್ನು ಬ್ಯಾಂಕ್‌ನಲ್ಲಿ ಠೇವಣಿ ಇಡಬಹುದು. ಆದರೆ ಯಾರೂ ಸಹ ಇತ್ತ ಸುಳಿಯಲಿಲ್ಲ.

(ಶಹಾದತುಲ್ ಖುರ್‌ಆನ್, ರೂಹಾನಿ ಖಝಾಈನ್, ಸಂಪುಟ–6, ಪುಟ–369)

ಪೂರ್ವದಿಂದ ಪಶ್ಚಿಮದ ಅಂತ್ಯದವರೆಗೆ ನನ್ನ ಮುಂದೆ ದೈವಿಕ ಚಿತ್ರ ತೋರಿಸುವ ಯಾರಾದರೂ ಪಾದರಿ ಇದ್ದಾರೆಯೇ?

ಅಲ್ಲಾಹನು ಯಾವ ರೀತಿಯ ಪ್ರತಾಪ ನನಗೆ ನೀಡಿರುವವರೆಂದರೆ ಯಾವ ಪಾದರಿಯು ನನ್ನ ಎದುರಿಗೆ ಬರಲು ಸಾಧ್ಯವಿಲ್ಲ. ಒಂದು ಕಾಲವಿತ್ತು. ಈ ಜನರು ಮಾರುಕಟ್ಟೆಗಳಲ್ಲಿ ಕೂಗಿ ಕೂಗಿ ಹೇಳುತ್ತಿದ್ದರು. ಪ್ರವಾದಿಯಿಂದ ಯಾವ ಪವಾಡವು ಸಂಭವಿಸಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಯಾವುದೇ ಮುನ್ಸೂಚನೆ ಇಲ್ಲ ಎಂದು. ಅಲ್ಲಾಹನು ಅವರ ಮೇಲೆ ಎಂತಹ ಭಯ ಉಂಟು ಮಾಡಿದ ಎಂದರೆ ಈ ಕಡೆ ಮುಖ ಮಾಡದೆ ಅವರೆಲ್ಲ ಇಹಲೋಕ ತ್ಯಜಿಸಿದರು. ಯಾರ ಕೈಯಲ್ಲಿ ನನ್ನ ಜೀವನವಿದೆಯೋ ಆತನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ ಯಾವುದೆ ಪಾದರಿ ನನ್ನ ಎದುರಾಗಿ ಬಾಯಿ ತೆರೆದರೆ ಅಲ್ಲಾಹನು ಅವನಿಗೆ ಅಪಮಾನಿತನಾಗಿ ಮಾಡುವನು. ಮತ್ತು ಕಠಿಣ ಶಿಕ್ಷೆ ನೀಡುವನು. ಅವರ ಉದಾಹರಣೆ ಸಹ ದೊರೆಯದು. ನಾನು ತೋರಿಸುವಂತಹ

ದೃಷ್ಟಾಂತಗಳು ಅವರ ಕಪೋಲಕಲ್ಪಿತ ದೇವನಿಂದ ತೋರಿಸಲು ಸಾಧ್ಯವಾಗದು. ನನಗಾಗಿ ಅಲ್ಲಾಹನು ಆಕಾಶದಿಂದಲು ದೃಷ್ಟಾಂತಗಳನ್ನು ಸುರಿಸುವನು ಮತ್ತು ಭೂಮಿಯಿಂದಲೂ ನಾನು ಸತ್ಯವಾಗಿ ಹೇಳುತ್ತೇನೆ. ಈ ಅನುಗ್ರಹ ಬೇರೆ ಸಮುದಾಯಗಳಿಗೆ ನೀಡಲಾಗಿಲ್ಲ, ಭೂಮಿಯ ಮೇಲೆ ದೇವರ ಚಿಹ್ನೆಯನ್ನು ನನ್ನ ಮುಂದೆ ತೋರಿಸಬಲ್ಲ ಯಾರಾದರೂ ಇದ್ದಾರೆಯೇ? ನಾವು ಮೈದಾನವನ್ನು ಜಯಿಸಿದ್ದೇವೆ. ನಮ್ಮ ಎದುರಿಗೆ ಬರಲು ಯಾರಿಂದಲೂ ಸಾಧ್ಯವಿಲ್ಲ." (ಹಖೀಖತುಲ್ ವಹಿ, ರೂಹಾನಿ ಖಿಝಾಈನ್, ಸಂಪುಟ–22, ಪುಟ–348)

ಎಲ್ಯೆ ಯೂರೋಪ್ ಮತ್ತು ಅಮೇರಿಕಾದ ಪಾದ್ರಿಗಳೇ! ನನ್ನನ್ನು ಎದುರಿಸಿ ಬನ್ನಿ, ನಮ್ಮನ್ನು ಎದುರಿಸಿ, ಎರಡು ವ್ಯಕ್ತಿಗಳಲ್ಲಿ ಎಂದರೆ ಹಝ್ರತ್ ಮಸೀಹ್ ಮೌಊದ್ ಮತ್ತು ಹಝ್ರತ್ ಸಯ್ಯದನಾ ಹಝ್ರತ್ ಮುಸ್ತಫಾ(ಸ) ರವರ ಆಧ್ಯಾತ್ಮಿಕ ಆಶೀರ್ವಾದ ಮತ್ತು ಕಾರುಣ್ಯಗಳ ನೆಲೆಯಲ್ಲಿ ಯಾರು ಜೀವಂತರಾಗಿದ್ದಾರೆ..... ಓ ಯೂರೋಪ್ ಮತ್ತು ಅಮೇರಿಕಾದ ಪಾದರಿಗಳೇ! ಏಕೆ ಹಾಗೆ ಸುಮ್ಮನೆ ಪರದಾಡುತಿದ್ದೀರಿ. ನೀವು ಬಲ್ಲರು. ನಾನೊಬ್ಬ ಮನುಷ್ಯನಾಗಿದ್ದೇನೆ. ಕೋಟ್ಯಾನು ಮನುಷ್ಯರಲ್ಲಿ ಹೆಸರನ್ನು ಪಡೆದಿದ್ದೇನೆ. ಬನ್ನಿ ನನ್ನ ಎದುರಿಗೆ ಬನ್ನಿ, ನನ್ನಲ್ಲಿ ಮತ್ತು ನಿಮ್ಮಲ್ಲಿ ಒಂದು ವರ್ಷದ ಅವಧಿ ನಿಗದಿಯಾಗಲಿ, ಈ ಅವಧಿಯಲ್ಲಿ ದೇವನ ದೃಷ್ಟಾಂತ ಮತ್ತು ದೇವನ ಶಕ್ತಿಯುತ ಭವಿಷ್ಯವಾಣಿಗಳು ನಿಮ್ಮಿಂದ ಪ್ರಕಟಗೊಂಡರೆ ಮತ್ತು ನಾನು ನಿಮ್ಮಿಂದ ಸೋತರೆ ಒಪ್ಪಿಕೊಳ್ಳುತ್ತೇನೆ. ಮರಿಯಮ್‌ನ ಪುತ್ರ ಈಸಾ ದೇವನಾಗಿದ್ದಾನೆ ಎಂದು. ಆದರೆ ಆ ಸತ್ಯವಾದ ದೇವರು ಅವನಿಗೆ ನಾನು ಬಲ್ಲೆ. ನೀವು ಬಲ್ಲವರಲ್ಲ ಅವನು ನನಗೆ ವಿಜಯ ದಯಪಾಲಿಸಿದ್ದಾನೆ. ನಿಮ್ಮ ಧರ್ಮ ದೈವಿಕ ದೃಷ್ಟಾಂತಗಳಿಂದ ವಂಚಿತನಾಗಿದ್ದು ಸಾಬೀತಾಗಿದೆ. ಆದ್ದರಿಂದ ನಮ್ಮ ಧರ್ಮವನ್ನು ಸ್ವೀಕರಿಸಲಿ.

(ತರಿಯಾಖಿಲ್ ಖುಲೂಬ್, ರೂಹಾನಿ ಖಿಝಾಈನ್, ಸಂಪುಟ–15, ಪುಟ–160)

ತೌರಾತ್ ಮತ್ತು ಇಂಜೀಲ್‌ಗಳು ನ್ಯಾಯಶಾಸ್ತ್ರದ ವಿಜ್ಞಾನಗಳಲ್ಲಿ ಸೂರಾ ಫಾತಿಹಾದೊಂದಿಗೆ ಸ್ಪರ್ಧಿಸುವ ಶಕ್ತಿಯನ್ನು ಸಹ ಹೊಂದಿಲ್ಲ.

ಖುರ್‌ಆನ್, ತೌರಾತ್ ಹಾಗೂ ಇಂಜೀಲಿನ ಶಿಕ್ಷಣಗಳನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಿದ ನಂತರ ಖುರಆನ್‌ನ ಪ್ರೌಢಿಮೆಯನ್ನು ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ತೌರಾತ್ ಹಾಗೂ ಇಂಜೀಲ್ ಖುರ್‌ಆನ್ ಅನ್ನು ಹೇಗೆ ಎದುರಿಸಬಲ್ಲದು? ಕೇವಲ ಪವಿತ್ರ ಖುರ್‌ಆನ್‌ನ ಪ್ರಥಮ ಅಧ್ಯಾಯದೊಂದಿಗೆ ಮಾತ್ರ ಎದುರಿಸಬಯಸಿದರೆ (ಎಂದರೆ ಸೂರಾ ಫಾತಿಹನೊಂದಿಗೆ ಅದರದ್ದು ಕೇವಲ 7 ವಚನಗಳಿವೆ) ಅವು ಯಾವ ಕ್ರಮದಲ್ಲಿವೆ ಮತ್ತು ಅದರ ಸಂಯೋಜನೆಯು ದೃಢ ಮತ್ತು ನೈಸರ್ಗಿಕವಾಗಿದೆ. ಈ ಸೂರಾದಲ್ಲಿ ನೂರಾರು ಸಂಗತಿಗಳು, ಧಾರ್ಮಿಕ ಜ್ಞಾನ ಮತ್ತು ಆಧ್ಯಾತ್ಮಿಕ ಬುದ್ಧಿವಂತಿಕೆಯನ್ನು ಒಳಗೊಂಡಿದೆ. ಅದನ್ನು ಮೂಸಾ(ಅ) ರವರ ಗ್ರಂಥದಿಂದ ಅಥವಾ ಯೇಸು(ಅ) ರವರ ಇಂಜೀಲಿನಿಂದ ತುಲನೆ ಮಾಡಲು ಹೊರಟರೆ, ನೀವು ಆಯಸ್ಸುಪೂರ್ತಿ ಪ್ರಯತ್ನಪಟ್ಟರೂ ಸಾಧ್ಯವಾಗದು. ಇದು ಮಾತು ಬರೀ ಮಾತಲ್ಲ. ಬದಲು ವಾಸ್ತವವಾಗಿದೆ. ತೌರಾತ್ ಮತ್ತು ಇಂಜೀಲ್‌ಗಳು ನ್ಯಾಯಶಾಸ್ತ್ರದ ವಿಜ್ಞಾನಗಳಲ್ಲಿ ಸೂರಾ ಫಾತಿಹಾದೊಂದಿಗೆ ಸ್ಪರ್ಧಿಸುವ ಶಕ್ತಿಯನ್ನು ಸಹ ಹೊಂದಿಲ್ಲ. ನಾವೇನು ಮಾಡಲು ಸಾಧ್ಯ? ಹೇಗೆ ನಿರ್ಣಯಿಸಲಿ? ಫಾದರಿಗಳು ನಮ್ಮ ಯಾವ ಮಾತನ್ನು ಸಹ ನಂಬುವುದಿಲ್ಲ. ಒಳ್ಳೆಯದು ಅವರು ತಮ್ಮ ತೌರಾತ್ ಅಥವಾ ಬೈಬಲ್‌ನ ಜ್ಞಾನ ಮತ್ತು ಸತ್ಯಗಳನ್ನು ವಿವರಿಸುವಲ್ಲಿ ಮತ್ತು ದೈವತ್ವದ ಪದದ ಗುಣಲಕ್ಷಣಗಳನ್ನು ತೋರಿಸಿ ಅದನ್ನು ಪರಿಪೂರ್ಣವೆಂದು ಪರಿಗಣಿಸಿದರೆ, ಹಾಗೂ ಅವರ ಒಟ್ಟು ಶೈಕ್ಷಣಿಕ ಪುಸ್ತಕಗಳಲ್ಲಿ ಅವು ಎಪ್ಪತ್ತರಷ್ಟು ಹತ್ತಿರವಾಗಿದ್ದರೆ ನಾವು ರೂ. 500/– ರೂಪಾಯಿಗಳನ್ನು ಬಹುಮಾನವಾಗಿ ನೀಡಲು ಸಿದ್ಧರಿದ್ದೇವೆ. ಅವರು ಷರಿಅತ್ ಮತ್ತು ಸತ್ಯಸಾಕ್ಷ್ಯಗಳು ಮತ್ತು ಬೋಧನೆಗಳ ಬುದ್ಧಿವಂತಿಕೆ ಮತ್ತು ಜ್ಞಾನ ಭಂಡಾರ ಮತ್ತು ದೈವಿಕ ಲಕ್ಷಣಗಳನ್ನು ತೋರಿಸಬಹುದು. ಇದನ್ನು ನಾವು ಸೂರ: ಫಾತಿಹದಿಂದ ಕಲಿಯಬಹುದು. ಅದಕ್ಕಿಂತ ಕಡಿಮೆಯಿದ್ದರೆ ಹೇಳಲಿ. ತಾವು ಅವರ ಕೇಳಿಕೆ ಮೇರೆಗೆ ಇನ್ನು ಹೆಚ್ಚಿಸುವೆವು. (ಸಿರಾಜುದ್ದೀನ್ ಈಸಾಯಿಕೇ ಚಾರ್ ಸವಾಲೋಂ ಕೇ ಜವಾಬ್, ರೂಹನಿ ಖಿಝಾಈನ್, ಸಂಪುಟ–12, ಪುಟ–360)

ನಾವು ಆಶ್ಚರ್ಯಚಕಿತರಾಗಿದ್ದೇವೆ. ಯಾರು ಕ್ರಿಸ್ತ ಧರ್ಮದ ಅಬ್ಬರವನ್ನು ತಡೆದರು, ಯಾರು ಇಸ್ಲಾಮಿನ ದೇವರನ್ನು ಜೀವಂತ ದೇವರು ಮತ್ತು ಇಸ್ಲಾಮಿನ ಪ್ರವಾದಿಯನ್ನು ಜೀವಂತ ಪ್ರವಾದಿ ಎಂದು ಹಾಗೂ ಇಸ್ಲಾಮಿನ ಗ್ರಂಥವನ್ನು ಜೀವಂತ ಗ್ರಂಥ ಎಂದು ಸಾಬೀತು ಮಾಡಿದರು ಮತ್ತು ಕ್ರಿಸ್ತರ ದೇವರನ್ನು ಅವರ ಪ್ರವಾದಿಯನ್ನು ಮತ್ತು ಅವರ ಗ್ರಂಥವನ್ನು ಮೃತಪಟ್ಟಿದ್ದು ಎಂದು ಸಾಬೀತುಗೊಳಿಸಿದರು. ಅವರ ಕುರಿತು ಮೌಲ್ವಿಗಳು ಹೇಳುತ್ತಾರೆ. ಅವರನ್ನು ಕ್ರೈಸ್ತರು ತಮ್ಮ ಹಿತಾಸಕ್ತಿಗಾಗಿ ನಿಲ್ಲಿಸಿದ್ದರು ಎಂದು. ಇಸ್ಲಾಮಿನ ಇಂತಹ ಬಲಶಾಲಿ ಜಟ್ಟಿ, ಅವರು ಕ್ರಿಸ್ತರ ಸುಳ್ಳು ನಂಬಿಕೆಗಳನ್ನು ಗಾಳಿಗೆ ತೂರಿದರು. ಅವರೊಂದಿಗೆ ಕ್ರೈಸ್ತರು ಒಂದಾಗಬಹುದೇ?

ಬ್ರಿಟಿಷರ ಮೂಲಕವೇ ಅಥವಾ ಈ ಮೌಲ್ವಿಗಳು ಮತ್ತು ಅವರ ಅಂಧ ಭಕ್ತರ ಪಾಲನೆಯಲ್ಲಿ ಮುನ್ನಿಫ್ ಪತ್ರಿಕೆಯ ಸಂಪಾದಕರು ಸುಳ್ಳು ಹೇಳುತ್ತಿದ್ದಾರೆ. ಓದುಗರು ಸ್ವತ: ನಿರ್ಧರಿಸಲಿ.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಒಂದು ಪ್ರತ್ಯೇಕ ವಿಭಾಗ. ಇಂದು ಪಶ್ಚಿಮ ಸರಕಾರಗಳಲ್ಲಿ ಇದರಂತೆ ಕಾರ್ಯರೂಪ ಮಾಡುತ್ತಿದ್ದಾರೆ. ಆದರೆ ಈ ಸಂಬಂಧ ಇಸ್ಲಾಂ ಧರ್ಮವು ಇದರ ಬುನಾದಿ ಹದಿಮೂರು ನೂರು ವರ್ಷಗಳ ಹಿಂದೆಯೇ ಸ್ಥಾಪಿಸಿತ್ತು.

**ವ ಔಫೂ ಬಿಲ್ ಅಹದಿ** ತಮ್ಮ ಕರಾರುಗಳನ್ನು ಪಾಲಿಸಿ ನೋಡಲಿಕ್ಕೆ ಈ ವಾಕ್ಯ ಅನಾಥರ ವಿಷಯಕ್ಕೆ ಸಂಬಂಧಿಸಿಲ್ಲ ಎಂದು ಕಂಡುಬರುತ್ತದೆ. ಏಕೆಂದರೆ ಕರಾರು ಅನಾಥರೊಡನೆ ಯಾವ ವಿಶೇಷ ಸಂಬಂಧ ಹೊಂದುವಂತೆ ಕಾಣುವುದಿಲ್ಲ, ಆದರೆ ವಾಸ್ತವ ಹೀಗಿಲ್ಲ. ಏಕೆಂದರೆ (1) ಕರಾರು ಎಂಬ ಅರ್ಥ ಹೊಣೆಗಾರಿಕೆ ಎಂದೂ ಆಗಿರುತ್ತದೆ. ಆದ್ದರಿಂದ ಹೇಳಲಾಗುತ್ತದೆ. **ಫುಲಾನುನ್ ವಲಿಯ್ಯುಲ್ ಅಹ್ದಿ** ಎಂದರೆ ಸರಕಾರದ ಹೊಣೆಗಾರಿಕೆಗೆ ಬದ್ಧ. ಈ ಅರ್ಥದನ್ವಯ ಈ ವಾಕ್ಯದ ಅರ್ಥ ಅನಾಥರ ಪೈಕಿ ನಿಮ್ಮ ಹೊಣೆಗಾರಿಕೆಯನ್ನು ಪಾಲಿಸಿರಿ. ಅವರಿಗೆ ಅಗತ್ಯವಿರುವವರೆಗೆ ಅವರ ಧನದ ವ್ಯವಸ್ಥೆಯನ್ನು ಮಾಡಿರಿ. ಅವರ ಧನ ಅವರಿಗೆ ಒಪ್ಪಿಸುವ ಸಮಯ ಬಂದಾಗ ಅವರ ಧನವನ್ನು ಅವರಿಗೆ ನೀಡಿರಿ. ಇನ್ನೊಂದೆಡೆ ಈ ಬಗ್ಗೆಯೂ ಗಮನ ಸೆಳೆಯಲಾಗಿದೆ. ಅನಾಥರ ಧನದ ಸಂರಕ್ಷಣೆ ಮಾಡುವುದು ಅವರ ಮೇಲೆ ಉಪಕಾರವೇನಲ್ಲ. ಬದಲು ಇದು ಅಲ್ಲಾಹನ ಆದೇಶವಾಗಿರುತ್ತದೆ. ಮತ್ತು ಇಸ್ಲಾಮಿ ನಿಯಮದ ಒಂದು ಅಂಗವಾಗಿದೆ. ಆದ್ದರಿಂದ ಉಪಕಾರದಿಂದ ಈ ಕಾರ್ಯ ಮಾಡುವುದು ಬೇಡ. ಬದಲು ತಮ್ಮ ಕರ್ತವ್ಯವೆಂದು ಭಾವಿಸಿ ಮಾಡಿರಿ. (2) ಹಾಗೆ ಅನಾಥನು ತನ್ನ ಸಂಪತ್ತಿನ ಆಗುಹೋಗುಗಳ ಬಗ್ಗೆ ಪ್ರಶ್ನಿಸುವುದಿಲ್ಲ. ಆದ್ದರಿಂದ ಅಲ್ಲಾಹನು ಅನಾಥರ ಧನವನ್ನು ತನ್ನ ಕರಾರೆಂದು ಹೇಳಿದ್ದಾನೆ ಏಕೆಂದರೆ ಅವರ ಸಂಪತ್ತು ಕಬಳಿಸಿದರೆ ನಮಗೆ ಕೇಳುವವರು ಯಾರಿಲ್ಲಾ ಎಂದು ಭಾವಿಸಬಾರದು. ಆದ್ದರಿಂದ ಹೇಳಿದನು. ಯಾರಾದರೂ ಹೀಗೆ ಮಾಡಿದರೆ, ನಾವು ಕೇಳುವೆವು, ಇದು ನಮ್ಮ ಕರಾರು ಆಗಿದೆ.

(3) ಅನಾಥರ ಬಗ್ಗೆ ವಿವರಿಸುತ್ತ ಅದರೊಂದಿಗೆ ಅನಾಥರಂತಿರುವ ಜನರ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಉದಾಹರಣೆಗೆ ದುರ್ಬಲ ಸಮುದಾಯಗಳು ತಮ್ಮನ್ನು ಶಕ್ತಿಯುಳ್ಳ ಸಮುದಾಯಗಳಿಗೆ ತನ್ನ ರಕ್ಷಣಾ ದೃಷ್ಟಿಯಿಂದ ಸಮರ್ಪಣೆ ಮಾಡುತ್ತಾರೆ. ಆದ್ದರಿಂದ ಅನಾಥರೊಂದಿಗೆ ಇವರ ಹಕ್ಕುಗಳ ಬಗ್ಗೆಯೂ ಗಮನ ಸೆಳೆಯಲಾಗಿದೆ. ಕೆಲವು ಸಮುದಾಯಗಳು ಅನಾಥ ರಿತಿಯಲ್ಲಿರುತ್ತವೆ. ಅವರ ಹಕ್ಕುಗಳು ನಿಮ್ಮ ಹಿಡಿತದಲ್ಲಿರುತ್ತವೆ. ನಿಸ್ಸಂಶಯವಾಗಿಯೂ ನಿಮ್ಮ ಕರ್ತವ್ಯವಾಗಿರುವುದು, ಅವರ ಹಕ್ಕುಗಳನ್ನು ಪಾಲಿಸಿರಿ. ಆದರೆ ಸದಾ ನಿಮ್ಮ ಹಿಡಿತ ಸಾಧಿಸದಿರಿ. ಬದಲು ಅವರ ಪ್ರಾಪ್ತ ವಯಸ್ಸಿಗೆ ಬಂದಾಗ ಅವರಿಗೆ ಅವರ ಸಂಪತ್ತನ್ನು ಮರಳಿಸಿರಿ. ಲೋಕವು ಈ ಆದೇಶದಂತೆ ನಡೆದುಕೊಂಡರೆ ಇಂದು ಕಾಣುತ್ತಿರುವ ಸಮುದಾಯಕ ದ್ವೇಷ ದೂರವಾಗಬಹುದು. ಅದರಲ್ಲಿ ಯಾವ ಸಂಶಯವು ಇಲ್ಲ. ಕೆಲ ಸಂದರ್ಭಗಳಲ್ಲಿ ಒಂದು ಶಕ್ತಿಯುತ ಸಮುದಾಯದ ಅಡಿಯಲ್ಲಿ ದುರ್ಬಲ ಸಮುದಾಯಗಳ ಹಕ್ಕುಗಳಿರುತ್ತವೆ ಆಗ ಅವರ ಕರ್ತವ್ಯವಾಗಿರುತ್ತದೆ. ಆ ದುರ್ಬಲ ಸಮುದಾಯ ಪ್ರಾಪ್ತಾವಸ್ಥೆಗೆ ಬಂದ ಮೇಲೆ ಆದಷ್ಟು ಶೀಘ್ರವಾಗಿ ಅವರ ಸಂಪತ್ತು ಅವರಿಗೆ ಒಪ್ಪಿಸಬೇಕು, ತಮ್ಮ ಹಿಡಿತದಲ್ಲಿ ಇರಿಸಿಕೊಳ್ಳಬಾರದು. **(ತಫ್ಸೀರ್ ಕಬೀರ್ ಸಂಪುಟ–4, ಪುಟ–332, ಮುದ್ರಣ 2010 ಖಾದಿಯಾನ್)**


"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ
ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.04, Thursday, 14 September 2023, Issue No. 37

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-36ರ ಉಳಿದ ಭಾಗ ಮುಂದುವರಿಸಲಾಗಿದೆ)*

ಹುಝೂರೆ ಅನ್ವರ್(ಅಬಿಅ) ಹೇಳಿದರು. ಈ ಎರಡು ವಚನಗಳಲ್ಲಿ ಅಲ್ಲಾಹನು ಪೈಗಂಬರ್ (ಸ) ರವರಿಗೆ ರಕ್ಷಣೆಯ ಉದ್ದೇಶದಿಂದ ಯುದ್ಧದ ಅನುಮತಿ ನೀಡಿದೆ. ಅದಾಗ್ಯೂ ಸ್ಪಷ್ಟಪಡಿಸಲಾಯಿತು. ಈ ಅನುಮತಿ ನೀಡಲು ಕಾರಣ ದೌರ್ಜನ್ಯ ಎಸಗುವವರು ಲೋಕದಿಂದ ಧಾರ್ಮಿಕ ಸ್ವಾತಂತ್ರ್ಯ ನಾಶಪಡಿಸಬಯಸುತ್ತಿದ್ದರು. ಯುದ್ಧದ ಅನುಮತಿಯು ಕೇವಲ ಮುಸಲ್ಮಾನರಿಗೆ ಮತ್ತು ಅದರ ಮಸೀದಿಗಳ ರಕ್ಷಣೆಗೆ ಅಥವಾ ಧರ್ಮ ಹರಡಲು ಕೊಡಲಾಗಿಲ್ಲ ಬದಲು ಪವಿತ್ರ ಖುರ್‌ಆನ್ ನಿರ್ದಿಷ್ಟವಾಗಿ ಹೇಳುತ್ತದೆ. ಮುಸಲ್ಮಾನರ ವಿರುದ್ಧ ಯುದ್ಧ ಮಾಡುವವರನ್ನು ತಡೆಯದಿರುತ್ತಿದ್ದರೆ ಯಾವ ಇಗರ್ಜಿ, ಸಂತ ಆಶ್ರಮಗಳು, ಮಂದಿರಗಳು, ಮಸೀದಿಗಳು ಮತ್ತು ಯಾವ ಆರಾಧನೆ ಸ್ಥಳವು ಸುರಕ್ಷಿತವಿರುತ್ತಿರಲಿಲ್ಲ.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಪವಿತ್ರ ಖುರ್‌ಆನ್ ಎಲ್ಲಾ ಧರ್ಮಗಳಿಗೆ ಮತ್ತು ವಿವಿಧ ವಿಶ್ವಾಸಿಗರ ಅನುಯಾಯಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಒದಗಿಸುವ ಏಕೈಕ ದೈವಿಕ ಗ್ರಂಥವಾಗಿದೆ. ಮಾತ್ರವಲ್ಲ ಒಂದು ಹೆಜ್ಜೆ ಮುಂದೆ ಹೋಗಿ ಎಲ್ಲಾ ಮುಸಲ್ಮಾನರಿಗೆ ಮತ್ತು ಮಸೀದಿಯಲ್ಲಿ ಬರುವ ಎಲ್ಲಾ ಜನರಿಗೆ, ಮುಸ್ಲಿಮೇತರ ಧಾರ್ಮಿಕ ಹಕ್ಕುಗಳನ್ನು ರಕ್ಷಿಸುವ ಆದೇಶ ನೀಡುತ್ತದೆ. ಇದು ಆ ದೈವಿಕ ಗ್ರಂಥವಾಗಿದೆ. ಅದು ಎಲ್ಲಾ ಧರ್ಮಗಳಿಗೆ, ಜಾತಿಗಳಿಗೆ ಮತ್ತು ವಿಶ್ವಾಸವುಲ್ಲವರಿಗೆ ಸುರಕ್ಷತೆ ಮತ್ತು ರಕ್ಷಣೆ ಒದಗಿಸುತ್ತದೆ. ಇದಾಗಿದೆ ಆ ಶುದ್ಧ ಮತ್ತು ಪ್ರತಿಯೊಬ್ಬರ ಹಕ್ಕುಗಳನ್ನು ರಕ್ಷಿಸುವ ಪವಿತ್ರ ಬೋಧನೆಗಳು, ಅದನ್ನು ನಾವು ಲೋಕದಾದ್ಯಂತ ಹರಡಲು ಪ್ರಯತ್ನಪಡುತ್ತಿದ್ದೇವು.

ಈ ಮಸೀದಿಯ ಕುರಿತು ನೀವು ಯೋಚಿಸುತ್ತಿರಬೇಕು. ನಾವು ಝಿಯಾಯಿನ್‌ನಲ್ಲಿ ಮಸೀದಿ ನಿರ್ಮಿಸಲು ಏಕೆ ನಿರ್ಣಯ ಕೈಗೊಂಡಿದ್ದೇವೆ ಎಂದು, ಖಂಡಿತವಾಗಿಯೂ ಅದರ ಮೂಲ ಉದ್ದೇಶ ಇದೀಗ ವಿವರಿಸಿದ ವಿಷಯಗಳೇ ಆಗಿವೆ. ಎರಡನೆಯದು ಏನೆಂದರೆ ಈ ನಗರದ ಇತಿಹಾಸ ತಿಳಿದವರಿಗೆ ಗೊತ್ತಿರಬಹುದು, ಝಿಯಾಯಿನ್ ನಗರದ ಅಡಿಪಾಯವು ಓರ್ವ Evangelist ಕ್ರೈಸ್ತ ಮಿಸ್ಟರ್. ಅಲೆಗ್ಸಾಂಡರ್ ಡೂಯಿ ಹಾಕಿರುತ್ತಾನೆ. ಅವು ದೇವನಿಂದ ನಿಯುಕ್ತನಾದ ದಾವೆ ಹೂಡಿದ್ದನು. ಮಿಸ್ಟರ್ ಡೂಯಿ ಇಸ್ಲಾಮಿನ ಕಡುವೈರಿಯಾಗಿದ್ದ, ಮತ್ತು ಮುಸ್ಲಿಮರೊಡನೆ ದ್ವೇಷ ಹೊಂದಿದ್ದ. ಈ ವಿರೋಧ ಅಹ್ಮದಿಯಾ ಜಮಾಅತಿನ ಸ್ಥಾಪಕರಿಗೆ ತಿಳಿಯಿತು. ಅವರು ನೇರವಾಗಿ ಉತ್ತರ ನೀಡಿದರು.

ಹುಝೂರೆ ಅನ್ವರ್(ಅಬಿಅ) ಹೇಳಿದರು. ನಿಮ್ಮಲ್ಲಿ ಕೆಲವರು ಪ್ರಶ್ನಿಸಬಹುದು. ಜಮಾಅತಿನ ಸ್ಥಾಪಕರು ಮಿಸ್ಟರ್ ಡೂಯಿಗೆ ಸಂಬೋಧಿಸಿ ಕಠಿಣವಾಗಿ ಏಕೆ ವರ್ತಿಸಿದರು. ಇದು ಅವರ ಪ್ರೀತಿಯ ಬೋಧನೆಗೆ ತಕ್ಕುದಾಗಿದೆಯೇ.

ನಿಜ ಹೇಳಬೇಕಾದರೆ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಶಾಂತಿಯುತ ಬೋಧನೆಗಳು, ಡೂಯಿ ಅವರಿಗೆ ನೀಡಿದ ಉತ್ತರದಲ್ಲಿ ಯಾವುದೇ ವಿರೋಧಭಾಸವಿಲ್ಲ. ಹಜ್‌ರತ್ ಮಸೀಹ್ ಮೌಊದ್(ಅ) ಯಾವ ಒಂದು ಸಂದರ್ಭದಲ್ಲೂ ಹಿಂಸೆ ಮತ್ತು ಉಗ್ರವಾದ ಅನುಸರಿಸುವ ಬೋಧನೆ ನೀಡಲಿಲ್ಲ. ವಾಸ್ತವವೇನೆಂದರೆ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಮಿಸ್ಟರ್. ಡೂಯಿಯ ಇಸ್ಲಾಮ್ ಮತ್ತು ಇಸ್ಲಾಮ್ ಧರ್ಮದ ಸ್ಥಾಪಕರ ವಿರುದ್ಧ ಅಪಶಬ್ಧಗಳ ಬಳಕೆ ಕೇಳಿಬಂದಾಗ ಅವರು ಗೌರವಪೂರ್ವಕವಾಗಿಯೇ ಸಾಕ್ಷ್ಯಗಳೊಂದಿಗೆ ಮನ್ನಿಸುವ ಪ್ರಯತ್ನ ಮಾಡಿದರು ಮತ್ತು ಅವರಿಂದಲು ಗೌರವ ಅಪೇಕ್ಷಿಸಿದರು. ಮುಸಲ್ಮಾನರ ಭಾವನೆಗಳನ್ನು ಆದರಿಸುವ ಅಪೇಕ್ಷೆ ಹೊಂದಿದರು. ಆದರೆ ಮಿಸ್ಟರ್ ಡೂಯಿ ಅದನ್ನು ಲೆಕ್ಕಿಸದೇ ಇಸ್ಲಾಮಿನ ವಿರುದ್ಧ ನಿಂತರು ಮತ್ತು ಘೋರ ವಿರೋಧ ವ್ಯಕ್ತಪಡಿಸಿದರು. ಉದಾಹರಣೆಗೆ ಬರೆಯುತ್ತಾರೆ. ಅವನು ದೇವನಿಂದ ಪ್ರಾರ್ಥಿಸುತ್ತೇನೆ. ಇಸ್ಲಾಂ ನಶಿಸುವ ದಿನಗಳು ಬೇಗ ಬರುವಂತಾಗಲಿ. ಓ ಪ್ರಭು ಇಸ್ಲಾಮ್ ಧರ್ಮವನ್ನು ನಾಶಪಡಿಸು.

ಮತ್ತು ತನ್ನ ಬರವಣಿಗೆಯಲ್ಲಿ ಮಿಸ್ಟರ್ ಡೂಯಿ ತುಂಬಾ ಅಹಂಕಾರದ ರೀತಿಯಲ್ಲಿ ಕ್ರೈಸ್ತ ಮತ್ತು ಇಸ್ಲಾಂ ವಿರುದ್ಧ ಯುದ್ಧವನ್ನು ಸಾರಿದನು. ಅವನು ಬರೆದ. ಮುಸಲ್ಮಾನರು ಕ್ರೈಸ್ತ ಧರ್ಮ ಸ್ವೀಕಾರ ಮಾಡದಿದ್ದರೆ ಅವರು ನಾಶಹೊಂದುವರು.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಈ ಅತ್ಯಂತ ಉಗ್ರ ಹೇಳಿಕೆಗಳು ಮತ್ತು ಅಪಶಬ್ಧಗಳ ಉತ್ತರವಾಗಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಸಾವಿರಾರು ಅಲ್ಲ, ಲಕ್ಷಾಂತರ ಮುಗ್ಧ ಜನರನ್ನು ಆ ಸಂಕಷ್ಟದಿಂದ ಪಾರು ಮಾಡಲು ಉಪಾಯ ಮಾಡಿದರು ಅವರು ಬಯಸಿದರೆ ಕ್ರೈಸ್ತ ಮತ್ತು ಮುಸಲ್ಮಾನರ ಮಧ್ಯ ಯುದ್ಧ ಬಯಸುವ ಡೂಯಿಯ ಮಾತಿಗೆ ಒಪ್ಪಬಹುದಾಗಿತ್ತು. ಅದರ ಬದಲು ಅವರು ಮಿಸ್ಟರ್ ಡೂಯಿಗೆ ಮುಬಾಹಲದ ಆಹ್ವಾನ ನೀಡಿದರು. ಅವರು ಹೇಳಿದರು. ಮುಸಲ್ಮಾನರ ವಿನಾಶಬಯಸುವ ಬದಲು ಮಿಸ್ಟರ್ ಡೂಯಿ ಹೀಗೆ ಪ್ರಾರ್ಥಿಸಲಿ. ನಮ್ಮಿಬ್ಬರಲ್ಲಿ ಯಾರು ಸುಳ್ಳುಗಾರನು ಅವನು ಎದುರಾಳಿಯ ಜೀವನದಲ್ಲಿ ಸಾಯುವಂತಾಗಲಿ. ಇದು ವಾಸ್ತವದಲ್ಲಿ ಒಂದು ಅನುಕಂಪದ ಕ್ರಿಯೆ ಮತ್ತು ಪರಿಸ್ಥಿತಿಯನ್ನು ಉತ್ತಮಪಡಿಸುವ ಮಾರ್ಗವಾಗಿತ್ತು. ಅದನ್ನು ಬಿಟ್ಟು ಮುಸಲ್ಮಾನರನ್ನು ಕ್ರೈಸ್ತರ ವಿರುದ್ಧ ಎತ್ತಿಕಟ್ಟುವ ಯುದ್ಧಕ್ಕೆ ಉತ್ತೇಜಿಸುವ ಕಾರ್ಯಕೈಗೊಂಡರು. ಹಝುರತ್ ಅಖದಸ್ ಮಸೀಹ್ ಮೌಊದ್(ಅ) ಮಿಸ್ಟರ್ ಡೂಯಿಗೆ ಪ್ರಾರ್ಥನೆಯ ಮೇಲೆ ಒತ್ತು ನೀಡಲು ಮತ್ತು ಈ ಸಮಸ್ಯೆ ದೇವನ ಸುಪರ್ಧಿಗೆ ಬಿಡಲು ಹೇಳಿದರು.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಇದು ಸತ್ಯವನ್ನು ತಿಳಿಯಲು ಒಂದು ಉಚಿತ ಹಾಗೂ ಶಾಂತಿಯುತ ಮಾರ್ಗವಾಗಿತ್ತು. ಇದು ವೈರತ್ವ ಹಾಗು ಉತ್ತೇಜನೆಯ ಬದಲು ಸಹಿಷ್ಣುತೆಯ ಪರಿಪೂರ್ಣ ಉಪಾಯವಾಗಿತ್ತು ಎಂದರೆ ಸುಳ್ಳಾಗಲಿಕ್ಕಿಲ್ಲ. ಈ ಪಂಥಾಹ್ವಾನದ ನಂತರ ಮಿಸ್ಟರ್ ಡೂಯಿ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಅವರ ವಿರುದ್ಧ ಅತ್ಯಂತ ಅಸಭ್ಯ ಮಾರ್ಗ ಅನುಸರಿಸಿದನು. ಹಾಗೆ ವರದಿ ಬಂತು. ಮಿಸ್ಟರ್ ಡೂಯಿ ಹೇಳಿದನು. ಭಾರತದಲ್ಲಿ ಓರ್ವ ಮುಹಮ್ಮದಿ ಮಸೀಹನಿದ್ದಾನೆ. ಅವನು ನನಗೆ ಪದೇ ಪದೇ ಪತ್ರಗಳನ್ನು ಬರೆಯುತ್ತಾನೆ. ಇಂತಹ ಸೊಳ್ಳೆಗಳ ನೊಣಗಳಿಗೆ ನಾನು ಉತ್ತರಿಸುವೆನು ಎಂದು ಭಾವಿಸಿದ್ದೀರಾ, ನಾನು ಅವನ ಮೇಲೆ ನನ್ನ ಕಾಲು ಇಟ್ಟರೆ ಅವನಿಗೆ ಅಳಿಸಿ ಹಾಕುವೆನು. **(ಮುಂದುವರಿಯುವುದು)**

***128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.